ತನಿಖೆಯ ಮೇಲೆ ಪರಿಣಾಮವಾಗುತ್ತದೆ. ಆ ದೃಷ್ಟಿಯಿಂದ ಚರ್ಚೆಯನ್ನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಅದಕ್ಕೆ ಪೂರಕವಾಗಿ ಮಾಹಿತಿಯನ್ನು ಕೊಡುತ್ತೇನೆಂದು ಹೇಳಿದೆ. ಇದು ತಮಗೆ ಬಿಟ್ಟಿರುವಂತಹ ವಿಚಾರ. ಇವತ್ತಿನದಿವಸ ಎಲ್ಲಾ ಕೇಸುಗಳನ್ನು ಮುಚ್ಚಿಹಾಕುವಂತಹದ್ದು ನಡೆಯುತ್ತಿದೆ. ಯಾವುದೋ ಬಿಲ್ಲು ಪಾಸು ಮಾಡುವುದು.......... ಯಾವುದೇ ರೂಪದಲ್ಲಿ ಚರ್ಚೆಗೆ ಕೊಡುವಂತಹದ್ದು ನಿಮಗೆ ಬಿಟ್ಟಿದ್ದು.

ಅಧ್ಯಕ್ಷರು:- O.K. ಆಮೇಲೆ ನೋಡೋಣ. ಈಗ ಕರ್ನಾಟಕ ವಿಶ್ವವಿದ್ಯಾನಿಲಯಗಳ ವಿಧೇಯಕವನ್ನು ತೆಗೆದುಕೊಳ್ಳೋಣ.

4. ಶಾಸನ ರಚನೆ

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

1. 2014 ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು):- ಮಾನ್ಯ ಅಧ್ಯಕ್ಷರೆ, 2014 ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು:- ಪ್ರಸ್ತಾವವನ್ನು ಮಂಡಿಸಲಾಯಿತು. ಮಾನ್ಯ ಸಚಿವರೆ, ತಾವು ಬಿಲ್ಲಿನ ಬಗ್ಗೆ explain ಮಾಡಿ.

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು):- ಮಾನ್ಯ ಅಧ್ಯಕ್ಷರೆ, ಮಹಿಳಾ ವಿಶ್ವವಿದ್ಯಾನಿಲಯ 2003ನೇ ಇಸವಿಯಲ್ಲಿ ಪ್ರಾರಂಭವಾಯಿತು. ಅದರ ಮುಖ್ಯ ಸ್ಥಾನ ಬಿಜಾಪುರದಲ್ಲಿದೆ. ಅದರ ವ್ಯಾಪ್ತಿ ಕೇವಲ 13 ಜಿಲ್ಲೆಗೆ ಮಾತ್ರ ಸೀಮಿತವಾಗಿರುತ್ತದೆ. ಹಾಗಾಗಿ ಈ

ವಿಧೇಯಕವನ್ನು ತರುವಂತಹ ಉದ್ದೇಶ ಏನೆಂದರೆ, ಅದರ ವ್ಯಾಪ್ತಿ ಇಡಿ ರಾಜ್ಯಕ್ಕೆ 30 ಜಿಲ್ಲೆಗಳಿಗೆ ವಿಸ್ತರಿಸುವಂತಹ ಒಂದು ವಿಷಯವಾಗಿರುತ್ತದೆ.

ಅಧ್ಯಕ್ಷರು:- ಮಾನ್ಯ ಸಚಿವರೆ, ತಾವು ಒಂದು ನಿಮಿಷ ಕೇಳಿ. ಶ್ರೀ ಯು.ಟಿ. ಖಾದರ್‌ರವರು ಒಂದು statement ಅನ್ನು ಮಾಡುತ್ತಾರೆ. ಅವರ ಇಲಾಖೆಗೆ ಸಂಬಂಧಪಟ್ಟ ವಿಷಯ Council ನಲ್ಲಿದೆ. ಅದಕ್ಕಾಗಿ ನಿಮ್ಮ ಅನುಮತಿಯನ್ನು ಕೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:- H1N1 ಗೆ ಸಂಬಂಧಪಟ್ಟಂತೆ ಸುಮಾರು 20 ಕೇಸ್‌ಗಳು record ಆಗಿವೆ. ಇದರಿಂದಾಗಿ ಸುಮಾರು 5-6 ಜನರು ಸತ್ತಿದ್ದಾರೆಂದು ಇದೆ. ಇದು ಗಂಭೀರವಾಗಿರುವಂತಹ ವಿಷಯ ಆಗಿರುತ್ತದೆ. ಈ ಬಗ್ಗೆ ನಾನು Zero Hour ನಲ್ಲಿ ಚರ್ಚೆ ಮಾಡುವುದಕ್ಕಾಗಿ ತಮಗೆ ಕಳುಹಿಸಿದ್ದೆ. ಅದರ ಬಗ್ಗೆ ಮಾನ್ಯ ಸಚಿವರು statement ಮಾಡುವುದಿದ್ದರೆ ಮಾಡಲಿ.

ಅಧ್ಯಕ್ಷರು:- ಮಾನ್ಯ ಸಚಿವರೆ, ತಾವು ಅನ್ನು statement ಮಾಡಿ.

5. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ಹೇಳಿಕೆ.

ವಿಷಯ: ವೈದ್ಯಾಧಿಕಾರಿಗಳಿಗೆ ಸಂಚಿತ ವೇತನವನ್ನು ನಿಗಧಿಪಡಿಸಿರುವ ಬಗ್ಗೆ.

= = = =

ಶ್ರೀ ಯು.ಟಿ. ಖಾದರ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಅಧ್ಯಕ್ಷರೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸೇವೆಯಲ್ಲಿ ಗ್ರಾಮೀಣ ಭಾಗ, ತಾಲ್ಲೂಕು ಕೇಂದ್ರ, ಜಿಲ್ಲಾ ಕೇಂದ್ರ ಮತ್ತು ನಗರಪಾಲಿಕೆಯ ವ್ಯಾಪ್ತಿಯಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಾಮಾನ್ಯ ಕರ್ತವ್ಯದ ವೈದ್ಯಾಧಿಕಾರಿಗಳಿಗೆ ಈ ಕೂಡಲೆ ಜಾರಿಗೆ ಬರುವಂತೆ ಹಾಗೂ ಸರ್ಕಾರದ ಮುಂದಿನ ಆದೇಶದವರೆಗೆ ಮಾಸಿಕ 40,000/- ರೂಪಾಯಿಗಳ ಸಂಚಿತ ವೇತನವನ್ನು ನಿಗಧಿಪಡಿಸಿ

ಆದೇಶವನ್ನು ಹೊರಡಿಸಿದೆ. ಈ ಸಂಚಿತ ವೇತನಕ್ಕೆ ಯಾವುದೇ ಭತ್ಯೆಯನ್ನು ನೀಡತಕ್ಕದ್ದಲ್ಲ. ಇದನ್ನು ಮುಂದುವರಿಸಿಕೊಂಡು ಗ್ರಾಮೀಣ ಭಾಗದಲ್ಲಿ 25,000 ಕ್ಕಿಂತ ಕಡಿಮೆ ಇರುವಂತಹ ಜನಸಂಖ್ಯೆ ಆಗಿದ್ದರೆ ಅಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗುತ್ತಿಗೆ ವೈದ್ಯರಿಗೆ ಮತ್ತೆ 2,000.00 ರೂಪಾಯಿಗಳು ಹೆಚ್ಚು ಅಂದರೆ ಅವರಿಗೆ 42,000.00 ರೂಪಾಯಿಗಳನ್ನು ಕೊಡುವುದರ ಬಗ್ಗೆ ಆದೇಶವನ್ನು ಸರ್ಕಾರವು ಜಾರಿಗೆ ತಂದಿದೆ. ಇದಕ್ಕಾಗಿ ಮಾನ್ಯ ಮುಖ್ಯಮಂತ್ರಿಯವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು:– O.K.

ಶ್ರೀ ಯು.ಟಿ. ಖಾದರ್:– ಖಾಲಿ ಇರುವಂತಹ ಹುದ್ದೆಗಳನ್ನು ತುಂಬುವುದಕ್ಕೆ ಸಂಬಂಧಪಟ್ಟಂತೆ ನಮ್ಮ ಇಲಾಖೆಯು ಸಂಬಂಧಪಟ್ಟಂತಹ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆ. ಬಹುಶಃ ಅಂಗವಿಕಲರಿಗೆ ಎಷ್ಟು, ವಿಕಲಚೇತನರಿಗೆ ಎಷ್ಟು percentage ಇಡಬೇಕೆಂಬ ಬಗ್ಗೆ ಆದೇಶ ಬಂದ ನಂತರ ನೇರ ನೇಮಕಾತಿಯನ್ನು ಮಾಡುತ್ತೇವೆ.

ಅಧ್ಯಕ್ಷರು:– ಯಾವ ಇಲಾಖೆಗೆ ಕಳುಹಿಸಿದ್ದೀರಿ?

ಶ್ರೀ ಯು.ಟಿ. ಖಾದರ್:– ಅಂಗವಿಕಲರಿಗೆ ಮತ್ತು ವಿಕಲಚೇತನರಿಗೆ ಎಷ್ಟು percentage ಕೊಡಬೇಕೆಂಬುವುದರ ಬಗ್ಗೆ ಕೇಳಿದ್ದೆವು, ಅವರ ಇಲಾಖೆಯಿಂದ ಈ ಬಗ್ಗೆ clear ಮಾಡಿ ಕಳುಹಿಸಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:– ಒಂದೊಂದು ನೀವು ಒಂದೊಂದು department ಗೆ ಸ್ಪಷ್ಟೀಕರಣವನ್ನು ಕೇಳಿಕೊಂಡು ಎಷ್ಟು percentage ಕೊಡಬೇಕೆಂದು ಕುಳಿತುಕೊಂಡರೆ ಹೇಗೆ? ಈ ಬಗ್ಗೆ ತಾವು ಎಲ್ಲಾ officers ಕರೆಸಿ ಖುದ್ದು ಮಾತನಾಡಿ.

ಶ್ರೀ ಯು.ಟಿ. ಖಾದರ್:– ಖಂಡಿತವಾಗಿ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:– ನೀವು file ಕಳುಹಿಸಿದರೆ ಅದು ಪುನಃ ವಾಪಸ್ಸು ಬರುವುದಿಲ್ಲ.

ಶ್ರೀ ಯು.ಟಿ. ಖಾದರ್:- ಈ ಬಗ್ಗೆ ಕರೆದು ಮಾತನಾಡಿದ ನಂತರ ಅಲ್ಲಿ file clear ಆಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, contract basis ಮೇಲೆ ಕರ್ತವ್ಯ ನಿರ್ವಹಿಸುವವರಿಗೆ 16,000 ರೂಪಾಯಿಗಳು ಎಂದು ತೆಗೆದುಕೊಳ್ಳುವುದು ಇತ್ತಲ್ಲಾ.

ಶ್ರೀ ಯು.ಟಿ. ಖಾದರ್:- 16,000 ರೂಪಾಯಿಗಳು ಎಂದು ನಾವು ಮಾಡಿರುವುದಲ್ಲ. 2012ರಲ್ಲಿ ನಿಮ್ಮ ಸರ್ಕಾರ ಇದ್ದಾಗ 16,000 ರೂಪಾಯಿಗಳು ಎಂದು ಮಾಡಿದ್ದೀರಿ. ಅವೆಲ್ಲವು clear ಆಗಿ ಈಗ ಇರುವಂತಹ contract basis ಮೇಲೆ ಕೆಲಸ ನಿರ್ವಹಿಸುವವರಿಗೆ 40,000+2,000=42,000.00 ರೂಪಾಯಿಗಳು ಎಂದು ಮಾಡಿದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಈಗ ನೇಮಕಾತಿ ಪ್ರಕ್ರಿಯೆಯನ್ನು ತೋರಿಸಿದ್ದೀರಾ?

ಶ್ರೀ ಯು.ಟಿ. ಖಾದರ್:- ಗುತ್ತಿಗೆ ಆಧಾರದ ಮೇಲೆ ನೇಮಕಾತಿಯನ್ನು ಮಾಡುವುದಕ್ಕೆ D.C. ಯವರಿಗೆ ಮತ್ತು D.H.O. ಗೆ ಅಧಿಕಾರ ಇದ್ದು ಈಗ ಅದು ಚಾಲ್ತಿಯಲ್ಲಿದೆ. ಇದರ ಜೊತೆಯಲ್ಲಿ permanent ಆಗಿ ನೇಮಕಾತಿ ಮಾಡುವುದಕ್ಕೂ ಸಹ ಸಂಬಂಧಪಟ್ಟವರಿಗೆ ಆದೇಶವನ್ನು ಮಾಡಿದ್ದೇವೆ. H1N1 ಗೆ ಸಂಬಂಧಪಟ್ಟಹಾಗೆ..........

ಶ್ರೀ ಬಿ.ಆರ್. ಪಾಟೀಲ್ (ಆಳಂದ):- ಮಾನ್ಯ ಅಧ್ಯಕ್ಷರೆ, ಇಲ್ಲಿ ಏನಾಗಿದೆ ಎಂದರೆ, ಗುತ್ತಿಗೆ ಆಧಾರಮೇಲೆ ಡಾಕ್ಟರ್‌ಗಳು ಬರುವುದಕ್ಕೆ ತಯಾರಿದ್ದಾರೆ. ಅಲ್ಲಿ Roster ಅನ್ನು ತಕ್ಷಣ ಅಳವಡಿಸುವುದಕ್ಕೆ ತಾವು ಆತುರಪಡುವುದಕ್ಕೆ ಹೋಗಬೇಡಿ. ಅವರು ಮೊದಲು ಬರಲಿ ಇದರಿಂದಾಗಿ ಜನರಿಗೆ ಅನುಕೂಲವಾಗಲಿ. Regular appointment ಮಾಡುವಾಗ ತಾವು Roster ಅನ್ನು apply ಮಾಡಿ.

ಶ್ರೀ ಯು.ಟಿ. ಖಾದರ್:- ನಾವು ಏತಕ್ಕಾಗಿ Roster ಅನ್ನು insist ಮಾಡಿದ್ದೇವೆಂದರೆ, ಮೂರು ವರ್ಷಗಳ ಕಾಲ ಗುತ್ತಿಗೆ ಆಧಾರದ ಮೇಲೆ

ಕರ್ತವ್ಯ ನಿರ್ವಹಿಸಿದವರನ್ನು permanent ಮಾಡಬೇಕೆಂದು, ಆದರೆ Roster system ಪ್ರಕಾರ ಆಗಿದ್ದರೆ ಮಾತ್ರ ಕಾನೂನಿನ ಪ್ರಕಾರ ಅವರನ್ನು ನೇಮಕಾತಿ ಮಾಡುವುದಕ್ಕೆ ಅವಕಾಶವಿದೆ. ನಾವು Roster system ಅನ್ನು ಮಾಡಿಕೊಂಡು ಮತ್ತು ಹೆಚ್ಚು ಉಳಿದಿದ್ದರೆ ನಮಗೆ permanent ಮಾಡುವುದು ಬೇಡ ನಾವು ಅಲ್ಲಿಯೇ ಕೆಲಸ ಮಾಡುತ್ತೇವೆಂದು ಅವರು ನಮಗೆ ಬರೆದುಕೊಟ್ಟರೆ ಅದನ್ನು ಸಹ ನಾವು consider ಮಾಡುತ್ತೇವೆ.

ಶ್ರೀ ಬಿ.ಆರ್. ಪಾಟೀಲ್:- Reservation ಗೆ ಸಂಬಂಧಪಟ್ಟಂತೆ ನಮ್ಮ ವಿರೋಧ ಇಲ್ಲ. ಖಂಡಿತವಾಗಿ ಮೀಸಲಾತಿಯ ಪ್ರಕಾರ ಅವರುಗಳು ಬರಲೇಬೇಕು. ಆದರೆ ಅಲ್ಲಿ ಡಾಕ್ಟರ್‌ಗಳು ಸಿಗುತ್ತಿಲ್ಲ. ನಮ್ಮ ಗುಲ್ಬರ್ಗಾ ಜಿಲ್ಲೆಯಲ್ಲಿ ಸುಮಾರು 17 ಜನ ಅರ್ಜಿಯನ್ನು ಹಾಕಿದ್ದರು. ಅಲ್ಲಿ 4 ಜನರನ್ನು ಮಾತ್ರ roster ಪ್ರಕಾರ ತೆಗೆದುಕೊಂಡು ಉಳಿದವರನ್ನು ತೆಗೆದುಕೊಳ್ಳಲಿಲ್ಲ. ಈ ತರಹ ಆದರೆ ಇದರಿಂದಾಗಿ ಜನರಿಗೆ ತೊಂದರೆಯಾಗುತ್ತಿದೆ. ತಕ್ಷಣ ತಾವು ಎರಡು ತರಹ ಮಾಡಿಕೊಳ್ಳಿ. ತಕ್ಷಣ Contract basis ಮೇಲೆ appointment ಮಾಡಿಕೊಳ್ಳಿ ನಂತರ ಅವರನ್ನು ಕಳುಹಿಸಿಬಿಡಿ. ಆಮೇಲೆ Regular ಆಗಿ appointment ಮಾಡಿಕೊಳ್ಳಿ ಅವರೆ ಇರಬೇಕೆಂದು ಇಲ್ಲ.

ಶ್ರೀ ಯು.ಟಿ. ಖಾದರ್:- ನೀವು ಹೇಳುವುದು correct ಇದೆ. ನಮ್ಮಲ್ಲಿ ಸೇರಿಕೊಳ್ಳುವ ವೈದ್ಯರುಗಳು ಮೂರು ವರ್ಷಗಳ ಕಾಲ ಸೇವೆಯನ್ನು ಮಾಡಿದ ತಕ್ಷಣ ನಮ್ಮನ್ನು permanent ಮಾಡಿ ಎಂದು ಕೇಳುತ್ತಾರೆ. ಅದಕ್ಕಾಗಿ ನಾವು ಯಾರು Roster system ಪ್ರಕಾರ ಬರುತ್ತಾರೆ ಅವರನ್ನು ಮೊದಲು ತೆಗೆದುಕೊಂಡು ಉಳಿದವರನ್ನು undertaking ತೆಗೆದುಕೊಂಡು ನಮ್ಮನ್ನು permanent ಮಾಡಿ ಎಂದು ಕೇಳಿಕೊಳ್ಳುವುದಿಲ್ಲ ಎಂದು ಅವರುಗಳು ಬರೆದುಕೊಟ್ಟರೆ ಅವರುಗಳನ್ನು ಸಹ ನಾವು extra ಆಗಿ ತೆಗೆದುಕೊಳ್ಳುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:- H1N1 ಇದು ಗಂಭೀರವಾಗಿರುವಂತಹದ್ದು. ರಾಜ್ಯದ ಎಲ್ಲಾ ಕಡೆಯಲ್ಲಿಯೂ ಭಯದ ಒಂದು ವಾತಾವರಣ ಇದೆ. ರಾಜ್ಯದಲ್ಲಿ 20 case report ಆಗಿದೆ. ಸರ್ಕಾರವು ಏನು ಕೆಲಸ ಮಾಡುತ್ತಿದೆ?

ಅಧ್ಯಕ್ಷರು:- ತಾವು ಆಮೇಲೆ ಮಾತನಾಡಿ.

ಶ್ರೀ ಯು.ಟಿ. ಖಾದರ್:- H1N1 ಗೆ ಸಂಬಂಧಪಟ್ಟಂತೆ ಯಾರು ಕೂಡ ಗೊಂದಲ ಪಡುವಂತಹ ಅಗತ್ಯ ಇಲ್ಲ. ಸರ್ಕಾರ ಮತ್ತು ಆರೋಗ್ಯ ಇಲಾಖೆಯಿಂದ ಮಾನ್ಯ ಮುಖ್ಯಮಂತ್ರಿಗಳ ಮಾರ್ಗದರ್ಶನದಲ್ಲಿ ಈಗಾಗಲೇ ಸ್ಪಷ್ಟವಾದ ಸಂದೇಶವನ್ನು ರಾಜ್ಯದ ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಅಗತ್ಯವಿರುವಂತಹ ಎಲ್ಲಾ ಔಷಧಗಳನ್ನು ಇಟ್ಟುಕೊಳ್ಳಬೇಕು. ಜಿಲ್ಲಾ ಮಟ್ಟದಲ್ಲಿ ICU ಮತ್ತು Isolation ward ಅನ್ನು separate ಆಗಿ ಇಟ್ಟುಕೊಳ್ಳುವುದಕ್ಕೆ ಅವಕಾಶ ಇರಬೇಕು. ಜನಸಾಮಾನ್ಯರು ಹೇಗೆ ಸಹಕಾರ ಕೊಡಬೇಕೆಂದು ಹೇಳಿದರೆ ಯಾರಿಗಾದರೂ ಮೂರು ದಿವಸಗಳ ನಂತರ continuous ಆಗಿ ಜ್ವರ ಬಂದರೆ ಅವರುಗಳು ತಮ್ಮದೆ ಮದ್ದು ಅನ್ನು ಮಾಡದೆ ಈ ಬಗ್ಗೆ ಜಾಗ್ರತೆಯನ್ನು ವಹಿಸಿಕೊಂಡು ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳಿಗೆ ಹೋಗೀ H1N1 test ಗೆ ಒಳಪಡಿಸಬೇಕು, positive ಆದ ತಕ್ಷಣ ಅವರಿಗೆ ಔಷಧವನ್ನು ಕೊಡುವಂತಹ ಕೆಲಸವನ್ನು ಮಾಡುತ್ತೇವೆ. ಇದು air borne, ಗಾಳಿಯಲ್ಲಿ, ಹರಡುವಂತಹ ವಿಚಾರ ಇದೆ. ಇದು ಸೊಳ್ಳೆ ಕಚ್ಚಿ ಅಥವಾ ಇನ್ನೊಂದು ಕಚ್ಚಿ ಹರಡುವಂತಹ ವಿಚಾರವಲ್ಲ. ಒಬ್ಬರಿಂದ ಒಬ್ಬರಿಗೆ ಹೋಗುವಂತಹ ಸಂದರ್ಭದಲ್ಲಿ H1N1 ನಿಂದ ಪೀಡಿತರಾಗಿ 106 ಜನರು ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ. ಇದರಿಂದಾಗಿ ಅಧಿಕೃತವಾಗಿ 7 ಜನರು ತೀರಿಹೋಗಿದ್ದಾರೆ. ಯಾರು ಸೋಂಕನ್ನು ಪಡೆದುಕೊಂಡು ಬರುತ್ತಾರೆ ಅವರು ಇನ್ನೊಬ್ಬರಿಗೆ ಹರಡತಂತಹ ರೀತಿಯಲ್ಲಿ ಮುಂಜಾಗ್ರತೆಯ ಕ್ರಮವನ್ನು ವಹಿಸಿಕೊಳ್ಳಬೇಕು. ಅವನು ಕೆಮ್ಮುವಾಗ ಒಬ್ಬನಾಗಿ ಕೆಮ್ಮುವಂತಹದ್ದು ಆಗಬೇಕು. ಮುಖಕ್ಕೆ mask ಹಾಕುವಂತಹದ್ದು ಆಗಬೇಕು. ಬಹುಶಃ ಯಾರು ಇವತ್ತು ಜನಸಾಮಾನ್ಯರು ಇಲಾಖೆಯಲ್ಲಿ ತೊಡಗಿಸಿಕೊಂಡು ಇದನ್ನು ಹದ್ದುಬಸ್ತಿಗೆ ತರಬೇಕು. ಇದು ಬಂದಂತಹ

ಸಂದರ್ಭದಲ್ಲಿ ಅವರಿಗೆ ಚಿಕಿತ್ಸೆಯನ್ನು ಕೊಡಿಸುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ. ಈಗ ಕೆಲವೊಂದು ಜನ ಮೃತರಾಗಿದ್ದಾರೆ. ಹೇಗೆಂದರೆ ಕೆಲವರಿಗೆ ಜ್ವರ ಬಂದಾಗ ಅದು viral fever ಆಗಿರಬಹುದು ಮತ್ತೊಂದು ರೀತಿ ಜ್ವರ ಇರಬಹುದೆಂದು ಅವರು 10–15 ದಿವಸಗಳವರೆಗೆ ಅವರು test ಗೆ ಹೋಗದೆ extreme ಆಗಿ, ಇವತ್ತೇನಾಗುತ್ತದೆಂದರೆ H1N1 ನಲ್ಲಿ ಅವರಿಗೆ diabetes, cardiac ಬೇರೆ ಬೇರೆ ರೀತಿ problem ಇದ್ದರೆ ಅವರಿಗೆ immunity power ವೇಗವಾಗಿ ಕಡಿಮೆ ಆಗುವ ಕಾರಣ ಅವರ ಜೀವಕ್ಕೆ ಅಪಾಯವಾಗುತ್ತದೆ. ಆದಕಾರಣ ಇದಕ್ಕೆ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಂಡಿದ್ದೇವೆ. ಮೊನ್ನೆ ಒಂದು ಉನ್ನತ ಮಟ್ಟದ ಸಭೆ ನಡೆದಿದೆ. ಇವತ್ತು ಬಿಲೇಕಪುರದಲ್ಲಿ ಒಂದು ಸಭೆ ಮಾಡಿದ್ದೇವೆ. ಇವತ್ತು 2.00 ಗಂಟೆಗೆ ಎಲ್ಲಾ D.H.O. ಮತ್ತು T.H.O. ಗಳಲ್ಲಿ video conference ಮಾಡಿಕೊಂಡು ಆರೋಗ್ಯ ಇಲಾಖೆಯನ್ನು ಹೇಗೆ ಸಜ್ಜುಗೊಳಿಸಬೇಕು, ಜನರಲ್ಲಿ ಹೇಗೆ ಜಾಗೃತಿ ಮಾಡಿಸಬೇಕೆಂಬ ಮಾಹಿತಿಯನ್ನೆಲ್ಲಾ ನಾವು ಕೊಡುತ್ತೇವೆ. ತಮ್ಮೆಲ್ಲರ ಸಲಹೆಗಳನ್ನು ಸ್ವೀಕರಿಸುತ್ತೇವೆ.

(ಗೊಂದಲ)

ಅಧ್ಯಕ್ಷರು:– No, it is never ending. Come on. ದೇಶಪಾಂಡೆಯವರು ಬಿಲ್ ಬಗ್ಗೆ explain ಮಾಡಿ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ, 2014 ಮೇಲೆ ಮುಂದುವರೆದ ಚರ್ಚೆ

ಶ್ರೀ ಆರ್.ವಿ. ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಸಚಿವರು):- ಮಾನ್ಯ ಅಧ್ಯಕ್ಷರೆ, 2003ನೇ ಇಸವಿಯಲ್ಲಿ ಪ್ರಾರಂಭವಾದ ವಿಶ್ವವಿದ್ಯಾನಿಲಯ ಸಾಕಷ್ಟು ಬೆಳೆದಿದೆ. ಆದರೆ ಇದರ ವ್ಯಾಪ್ತಿ ಕೇವಲ 13 ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿದೆ. ಹಾಗಾಗಿ ಮಹಿಳಾ ವಿಶ್ವವಿದ್ಯಾಲಯದ ವ್ಯಾಪ್ತಿ ಇಡೀ ಕರ್ನಾಟಕ ರಾಜ್ಯಕ್ಕೆ ಇರಬೇಕು, 30 ಜಿಲ್ಲೆಗಳಿಗೆ ಇರಬೇಕೆಂಬುದು ಮುಖ್ಯವಾದ ಉದ್ದೇಶ. ಇದನ್ನು ಮಾಡುವಾಗ ಮಂಡ್ಯದಲ್ಲಿ ಒಂದು ವಿಸ್ತರಣಾ ಕೇಂದ್ರ ಮತ್ತು ಸಂಶೋಧನಾ ಕೇಂದ್ರವನ್ನು ಮಾಡುತ್ತಿದ್ದೇವೆ. ಈಗಾಗಲೇ ಅಲ್ಲಿ ನಾವು 18 ಎಕರೆ land ನಾವು procure ಮಾಡಿದ್ದೇವೆ. 13 ಜಿಲ್ಲೆಗಳು ಅದರ ವ್ಯಾಪ್ತಿಗೊಳಪಟ್ಟಿದ್ದು ಉಳಿದಿರುವ 17 ಜಿಲ್ಲೆಗಳಲ್ಲಿ Government colleges ಏನಿವೆ, Automatically ಈ ಕಾನೂನು ಆದ ನಂತರ ಅವುಗಳು affiliate ಆಗುತ್ತವೆ. ಆದರೆ aided, un-aided college ಗೆ ಆರು ತಿಂಗಳುಗಳ ಅವಧಿಯನ್ನು ಕೊಡುತ್ತಿದ್ದೇವೆ. ಅವರು ಬೇಕಾದರೆ ಯುನಿವರ್ಸಿಟಿಗೆ affiliate ಆಗಬಹುದು ಅಥವ ಈಗಿರುವ ಯುನಿವರ್ಸಿಟಿಯಲ್ಲಿಯೇ continue ಮಾಡಬಹುದು. ನಾವು ಆ ರೀತಿ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಮುಖ್ಯವಾಗಿ ನಾಲ್ಕು ಕಾಲೇಜುಗಳು ಇವೆ. ನಮ್ಮ Maharani Women's Science and Arts College, Bangalore, Government VHD Institute of Home Science, Bangalore, Maharani Science and Arts College, Mysore and Government First Grade College for Women's, Mysore, ಇದು ನಾಲ್ಕು ಸರ್ಕಾರಿ ಕಾಲೇಜುಗಳಾಗಿದ್ದರೂ ಸಹ ಈ ಯುನಿವರ್ಸಿಟಿಯ ವ್ಯಾಪ್ತಿಯಲ್ಲಿ ನಾವು ಉದ್ದೇಶಪೂರ್ವಕವಾಗಿ ತಂದಿಲ್ಲ. ಏಕೆಂದರೆ ಕೇಂದ್ರ ಸರ್ಕಾರ ಈ ರಾಷ್ಟ್ರೀಯ ಉಚ್ಚೋತ್ತರ ಅಭಿಯಾನದ ಒಂದು ಹೊಸ ಕಾರ್ಯಕ್ರಮವನ್ನು ತಂದಿದೆ. 2012-13 ನೇ plan ನಲ್ಲಿ ಒಂದು ಲಕ್ಷ ಕೋಟಿ ರೂಪಾಯಿಗಳನ್ನು ಮೂಲಭೂತ ಸೌಕರ್ಯಗಳನ್ನು ಮಾಡಲಿಕ್ಕೆ, ಹೊಸ ವಿಶ್ವವಿದ್ಯಾನಿಲಯ

ಮಾಡಲಿಕ್ಕೆ, autonomous college, ಯುನಿವರ್ಸಿಟಿ ಮಾಡಲಿಕ್ಕೆ ಈ ತರಹ ವ್ಯವಸ್ಥೆ ಇದೆ. ಹಾಗಾಗಿ ಈ ನಾಲ್ಕು ಕಾಲೇಜುಗಳಲ್ಲಿ NAAC accreditation ಇದೆ. ಹಾಗಾಗಿ ಈ ಕಾಲೇಜಿನಿಂದ ನಾವು ಒಂದು cluster university ನಿರ್ಮಾಣ ಮಾಡಬೇಕು. ಒಂದು ಬೆಂಗಳೂರಿನಲ್ಲಿ, ಒಂದು ಮೈಸೂರಿನಲ್ಲಿ ಮಾಡಬೇಕೆಂದು ಉದ್ದೇಶದಿಂದ ಈಗಾಗಲೇ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ರಾಷ್ಟ್ರೀಯ ಉಚ್ಚೋತ್ತರ ಶಿಕ್ಷಣದಲ್ಲಿ ನಾವು ಸಾಧಾರಣ, 4,878/– ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರಕ್ಕೆ ಕೇಳಿದ್ದೇವೆ. ನಮ್ಮ ಎಲ್ಲಾ universies ನಮ್ಮ degree colleges ಗೆ ಸೇರಿದಂತೆ ಪ್ರತಿ ಕಾಲೇಜಿಗೆ 2 ಕೋಟಿ ರೂಪಾಯಿಗಳನ್ನು ಕೊಡಲಿಕ್ಕೆ ಕೇಳಿದ್ದೇವೆ. ಹೀಗೆ ಈ ನಾಲ್ಕು ಕಾಲೇಜುಗಳನ್ನು exclude ಮಾಡಿ ನಾವು ಈ ಕಾನೂನನ್ನು ತಂದಿದ್ದೇವೆ. ಇವತ್ತು ಮುಖ್ಯವಾಗಿ ಮಹಿಳಾ literacy ರಾಷ್ಟ್ರ ಮಟ್ಟದಲ್ಲಿ 65.4 ಇದೆ. ಕರ್ನಾಟಕದಲ್ಲಿ 68.8 ಇದ್ದರೂ ಸಹ ಪುರುಷರ literacy rate 82.47 ಇದೆ. ಹಾಗಾಗಿ ಮಹಿಳೆಯರಿಗೆ ಹೆಚ್ಚು ಉತ್ತೇಜನ ಕೊಡಬೇಕು. ಅದರಲ್ಲಿಯೂ ಬಡವರು, ರೈತರ ಮಕ್ಕಳು, ಕೂಲಿಕಾರರ, ಅಲ್ಪಸಂಖ್ಯಾತರ ಜನಾಂಗದ ಹೆಣ್ಣು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಕಾಲೇಜುಗಳಿಗೆ ಬರುವುದಿಲ್ಲ. ಹಾಗಾಗಿ ಮೊನ್ನೆ ಮುಖ್ಯಮಂತ್ರಿಗಳ Budget speech ಪ್ರಕಾರ ಈ ಒಂದು ವಿಸ್ತರಣೆ ಕಾನೂನನ್ನು ತಂದಿದ್ದೇವೆ. 50 degree colleges ಏನು ಪ್ರಾರಂಭಿಸಿದ್ದೇವೆ ಅದರಲ್ಲಿ 23 ಮಹಿಳಾ ಕಾಲೇಜುಗಳನ್ನು ಪ್ರಾರಂಭಿಸಿದ್ದೇವೆ. ಹಾಗಾಗಿ ಮಹಿಳೆಯರಿಗೆ ಹೆಚ್ಚಿನ ಉತ್ತೇಜನ ಕೊಡುವ ದೃಷ್ಟಿಯಿಂದ ಈ ತಿದ್ದುಪಡಿ ವಿಧೇಯಕವನ್ನು ತಂದಿದ್ದೇವೆ. ಸದನ ಇದಕ್ಕೆ ಮಾನ್ಯತೆ ಕೊಡಬೇಕೆಂದು ಕೋರುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು):– ಅಧ್ಯಕ್ಷರೆ, ಮಾನ್ಯ ಆರ್.ವಿ. ದೇಶಪಾಂಡೆಯವರು ಈ ಮಹಿಳಾ ವಿಶ್ವವಿದ್ಯಾಲಯಕ್ಕೆ ತಿದ್ದುಪಡಿ ವಿಧೇಯಕವನ್ನು ತಂದಿದ್ದಾರೆ. ಈ ವಿಶ್ವವಿದ್ಯಾನಿಯದ ವ್ಯಾಪ್ತಿ ರಾಜ್ಯಕ್ಕೆ ವಿಸ್ತರಣೆ ಆಗಬೇಕೆಂದು ಅದಕ್ಕೆ ಬಹಳ ವರ್ಷಗಳಿಂದ ಎಲ್ಲರಿಂದಲೂ ಬೇಡಿಕೆ ಇತ್ತು. ಏಕೆಂದರೆ ಮೊದಲು ಕೇವಲ

13 ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿತ್ತು. ಉಳಿದ 17 ಜಿಲ್ಲೆಗಳಿಗೂ ವಿಸ್ತಾರ ಮಾಡಬೇಕೆಂದು ಇದೆ. ಈಗೇನಾಗಿದೆ ಎಂದರೆ ಈ ಭಾಗದಲ್ಲಿದ್ದವರು ಬಿಜಾಪುರ ಜಿಲ್ಲೆಗೆ ಹೋಗಲಿಕ್ಕೆ ಸ್ವಲ್ಪ ತೊಂದರೆಯಾಗುತ್ತದೆ. ಈಗ VTU ಮಾಡಿದಿರಿ. ಈಗ Engineering College ರವರೆಲ್ಲಾ ಬೆಳಗಾಂನಲ್ಲಿರುವ VTU ಗೆ ಹೋಗುತ್ತಾರೆ. ಉತ್ತರ ಕರ್ನಾಟಕದ ಭಾಗ ನಿರ್ಲಕ್ಷ್ಯವಾಗಿದೆ. ಅಡಳಿತ ವಿಕೇಂದ್ರೀಕರಣ ಮಾಡಬೇಕೆಂಬ ಉದ್ದೇಶ ಇಟ್ಟುಕೊಂಡು ಎಲ್ಲಿಯವರೆಗೆ ಅಂದರೆ ಕೆಲವೊಂದು ಇಲಾಖೆಗಳನ್ನೆ ಬೆಳಗಾವಿ ಜಿಲ್ಲೆಗೆ ಬೇರೆ ಭಾಗಗಳಿಗೆ shift ಮಾಡಬೇಕೆಂಬ ಒಂದು ಕೂಗು ಏನಿದೆ ಬಹುಶಃ ಅದಕ್ಕೆ ಪೂರಕವಾಗಿ ಇವತ್ತು VTU ಬೆಳಗಾವಿಯಲ್ಲಿ ಸ್ಥಾಪನೆಯಾಯಿತು. ಅದೇ ರೀತಿ ಇವತ್ತು ಮಹಿಳಾ ವಿಶ್ವವಿದ್ಯಾನಿಲಯ ಸ್ಥಾಪನೆ ಆಯಿತು. ಬೀದರ್‌ನಲ್ಲಿ ಒಂದು ಯುನಿವರ್ಸಿಟಿ, ಬಾಗಲಕೋಟೆಯಲ್ಲಿ ತೋಟಗಾರಿಕೆ ಯುನಿವರ್ಸಿಟಿ ಈ ರೀತಿ ಆಯಿತು. ಆದರೂ ಆ ವ್ಯಾಪ್ತಿ ಏನಿದೆ ಇಡೀ ರಾಜ್ಯದ ವ್ಯಾಪ್ತಿಗೆ ಬರಲಿಲ್ಲ. ಹಾಗಾಗಿ ಮಹಿಳಾ ವಿಶ್ವವಿದ್ಯಾನಿಲಯದ್ದು ಹಾಗೇ ಉಳಿದಿತ್ತು. ಈಗ ನೀವು ಅದಕ್ಕೆ ಪೂರಕವಾಗಿ ಬಿಲ್ ತಂದಿದ್ದೀರಿ, ಆದರೆ ಈ ಸೆಕ್ಷನ್‌ನಲ್ಲಿ amendment ಮಾಡಲಿಕ್ಕೆ ಏನು ಅವಕಾಶ ಕೊಟ್ಟಿದ್ದೀರಿ? ನೀವು ಏನು ಹೇಳುತ್ತೀರಿ? aided, un-aided, ಇವುಗಳಿಗೆ six months time ಕೊಡುತ್ತೀರಿ. ಅಷ್ಟರಲ್ಲಿ ಅವರು ಅಲ್ಲಿ adopt ಮಾಡಿಕೊಳ್ಳಬೇಕೆ ಬೇಡವೆ ಎಂಬ choice ಕೊಡುತ್ತೀರಿ. Almost ನಾನು ಹೇಳುತ್ತೇನೆ ಯಾರೂ ಅದನ್ನು adopt ಮಾಡಿಕೊಳ್ಳುವುದಿಲ್ಲ. ನೀವು ಅದನ್ನು compulsory ಎಂದು ತಂದರೆ ಅದೇನಾದರೂ ಆಗುತ್ತದೆ. ಇವೆಲ್ಲಾ ಆ ವ್ಯಾಪ್ತಿಗೆ ಬರಲೇಬೇಕೆಂದರೆ ಅಲ್ಲಿಗೆ ಹೋಗುತ್ತಾರೆ. ನೀವು option ಕೊಟ್ಟರೆ ಆ ಯುನಿವರ್ಸಿಟಿಗಳು ಎಲ್ಲೆಲ್ಲಿ ಇರಬೇಕು, ಆ ಜಿಲ್ಲೆ ಪಕ್ಕದ ಜಿಲ್ಲೆಗಳಲ್ಲಿರುವ ಯುನಿವರ್ಸಿಟಿಗಳು ಅಲ್ಲಲ್ಲೇ ಇರುತ್ತವೆ ಅಷ್ಟೇ. ಇದಕ್ಕೆ ಕಾನೂನು ತಂದಿರುವುದಕ್ಕೆ ಏನೂ ಅರ್ಥವೇ ಇರುವುದಿಲ್ಲ. ಅಲ್ಲಿ ಇಡೀ ರಾಜ್ಯದ ವ್ಯಾಪ್ತಿಗೆ ತರಬೇಕೆಂಬ ಉದ್ದೇಶ ಇದಕ್ಕೆ ಪೂರಕವಾಗಿ ಆಗುವುದಿಲ್ಲ. ನಮ್ಮಲ್ಲಿ ಈ ಬಗ್ಗೆ ಕೆಲವು ಶಾಸಕರು ಚರ್ಚೆ ಮಾಡಿದಾಗ ತಮ್ಮ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅವರು ಇದು inconvenient ಆಗುತ್ತದೆ ಎಂದು ಹೇಳಿದ್ದಾರೆ. ಈಗ ಎಲ್ಲಾ ಕೆಲಸ

ಕಾರ್ಯಗಳು online ನಲ್ಲಿ ನಡೆಯುತ್ತವೆ. ಯುನಿವರ್ಸಿಟಿ ಬಿಜಾಪುರದ್ದು ಇರಲಿ, ಮತ್ತೊಂದು ಇರಲಿ, ಆದರೆ ಇವತ್ತು ನೀವು ತಂದಿರುವ ತಿದ್ದುಪಡಿಯ ಮೂಲ ಉದ್ದೇಶ ಸಾಧನೆಯಾಗುವುದಿಲ್ಲ. ಇದಕ್ಕೆ ನೀವು ಆರು ತಿಂಗಳು option ಕೊಟ್ಟ ಕೂಡಲೇ ಹೆಚ್ಚು ಕಡಿಮೆ ಎಲ್ಲರೂ ಯಾವ್ಯಾವ ಯುನಿವರ್ಸಿಟಿಗೆ adopt ಇದ್ದಾವೆ ಅಲ್ಲೇ ಇರುತ್ತಾರೆಯೇ ಹೊರತು ಅವರೇನು ಅಲ್ಲಿ ಬಿಟ್ಟು ಬಿಜಾಪುರಕ್ಕೆ ಬರುವುದಿಲ್ಲ. ಅದಕ್ಕಾಗಿ ಈ ಕಾನೂನಿಗೆ ತಿದ್ದುಪಡಿ ತಂದಿರುವುದರಲ್ಲಿ ಏನೂ ಅರ್ಥವೇ ಇಲ್ಲವೆಂದು ನಾನು ಹೇಳಬಯಸುತ್ತೇನೆ. ಇದನ್ನು compulsory ಮಾಡಿದರೆ ಅಡ್ಡಿಯಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಶಿರಸಿ):- ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೆಯಕ, 2014 ಅನ್ನು ಒಟ್ಟಾರೆ ನಾವೆಲ್ಲಾ ಸ್ವಾಗತಿಸಬೇಕಾದಂಥ ವಿಧೇಯಕವಾಗಿದೆ. ಆದರೆ ಈ ಸಂದರ್ಭದಲ್ಲಿ ಮಾನ್ಯ ಉನ್ನತ ಶಿಕ್ಷಣ ಸಚಿವರಲ್ಲಿ ನಾನು ವಿನಂತಿಸಿಕೊಳ್ಳುವುದೇನೆಂದರೆ, ವಿಶ್ವವಿದ್ಯಾನಿಲಯಗಳ ಒಂದು credibility ಇವತ್ತೇನಾಗಿದೆ ಎನ್ನುವ ಬಗ್ಗೆ ನಾವು ಇವತ್ತು ವಿಶ್ಲೇಷಣೆ ಮಾಡಬೇಕಾದ ಅವಶ್ಯಕತೆ ಇದೆ. ಅದರೊಳಗೆ ನಮ್ಮ ಸರ್ಕಾರ ಹಾಗಿತ್ತು, ಹಿಂದಿನ ಸರ್ಕಾರ ಹೀಗಿತ್ತು ಈ ರೀತಿ ಚರ್ಚೆಗೆ ಈ ವಿಷಯ ಒಳಪಡದೆ ಪಕ್ಷಾತೀತವಾಗಿ ವಿಶ್ವವಿದ್ಯಾನಿಲಯಗಳು ಯಾವ ಒಂದು ಘನತೆ ಗೌರವವನ್ನು ಕಾಪಾಡಿಕೊಂಡು ಅವು ನಿಜವಾದ ತಮ್ಮ ಉದ್ದೇಶಗಳನ್ನು ವಿದ್ಯಾರ್ಥಿಗಳ ಮೂಲಕ ಈಡೇರಿಸುವಂಥ ಪ್ರಯತ್ನಗಳೇನಾಗಬೇಕಾಗಿತ್ತೋ ಅದು ಇವತ್ತು ಒಂದು ರೀತಿ ಭ್ರಮನಿರಸನಗೊಳ್ಳುವಂಥ ಸ್ಥಿತಿ ಬಂದಿದೆ. ಎಲ್ಲಾ ವಿಶ್ವವಿದ್ಯಾನಿಯಗಳ ಸ್ಥಿತಿಗತಿಗಳನ್ನು ನೋಡಿದರೂ ಸಹ ನಮ್ಮೆಲ್ಲರಿಗೂ ಮನವರಿಕೆಯಾಗುತ್ತಿದೆ. ಯಾವ ವಿಶ್ವವಿದ್ಯಾನಿಲಯದ ಹತ್ತಿರ ಹೋದರೂ ಅಲ್ಲಿ ಒಂದಷ್ಟು ಹಗರಣಗಳ ಸರಮಾಲೆಯೇ ಇದೆ. ಆ ವಿಶ್ವವಿದ್ಯಾನಿಲಯ, ಈ ವಿಶ್ವವಿದ್ಯಾನಿಲಯವೆಂದಲ್ಲ, ನಾವು ಯಾವುದೇ ವಿಶ್ವವಿದ್ಯಾನಿಲಯಕ್ಕೆ ಹೋಗಲಿ, ಅದು ತನ್ನ ಮೂಲ ಉದ್ದೇಶವನ್ನು ಮರೆತು ಉಳಿದೆಲ್ಲಾ ರೀತಿಯ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಪರಿಣಾಮವಾಗಿ

ವಿಶ್ವವಿದ್ಯಾನಿಲಯಗಳ credibility ಇವತ್ತು ಹೊರಟುಹೋಗುತ್ತಿದೆ. ಹಾಗಾಗಿ Vice Chancellor ಮೇಲೆ ಅನೇಕ ರೀತಿಯ ತನಿಖೆಗಳು, ಆ ತನಿಖೆಗೆ ಮತ್ತೊಂದು ತನಿಖೆ ಇತ್ಯಾದಿಗಳು ಹೊರಗೆ ನಡೆಯುತ್ತಿರುವುದನ್ನು ನೋಡುತ್ತಿದ್ದೇವೆ. ನಾನು ಆ ವಿಷಯವನ್ನು ಹೇಳುವುದಿಲ್ಲ. ನಮ್ಮ ಮಹಿಳಾ ವಿಶ್ವವಿದ್ಯಾನಿಲಯಗಳಲ್ಲಿ ಏನಾಯಿತು ಎಂದರೆ ಮೊದಲಿಗೆ 2003 ರಲ್ಲಿ ಬಿಜಾಪುರದಲ್ಲಿ ಪ್ರಾರಂಭವಾಯಿತು. ನಮಗೆ ಗೊತ್ತಿದೆ, 13 ಜಿಲ್ಲೆಯ ವ್ಯಾಪ್ತಿಯಲ್ಲಿ 127 ಕಾಲೇಜುಗಳು ಇವೆ. ಸುಮಾರು 20 ಸಾವಿರ ವಿದ್ಯಾರ್ಥಿಗಳು ಇದರಲ್ಲಿ ಓದುತ್ತಿದ್ದಾರೆ. ಬಿಜಾಪುರದಲ್ಲಿ ಮಹಿಳಾ ವಿಶ್ವವಿದ್ಯಾನಿಲಯ ಪ್ರಾರಂಭವಾಗಿದ್ದಕ್ಕೆ ನಾವು ಸಂತೋಷಪಡಬೇಕು. ಇದಕ್ಕೆ 286 ಎಕರೆ ಜಾಗವಿದೆ. ಬಹಳ ದೊಡ್ಡ ಒಂದು ಸ್ಥಳ ಇದೆ. ಆದರೆ ಬಾಲಗ್ರಹಪೀಡೆ ರೀತಿ ಪ್ರಾರಂಭದಿಂದ ಅದು ಅಲ್ಲದೇ ಇರುವ ಹಗರಣಗಳಿಗೆ ಸಿಕ್ಕಿಹಾಕಿಕೊಂಡಿತು. ಉನ್ನತ ಶಿಕ್ಷಣ ಸಚಿವರಲ್ಲಿ ತಿಳಿಸುವುದೇನೆಂದರೆ ಈ ವಿಶ್ವವಿದ್ಯಾನಿಲಯಕ್ಕೆ ಬರಬೇಕೆಂದರೆ, ಈ ವಿಶ್ವವಿದ್ಯಾನಿಲಯದ credibility ಬಗ್ಗೆ ನಂಬಿಕೆ ಬರಬೇಕೆಂದಾದರೆ ಹಿಂದೆ Vice Chancellor Professor Shahida Akhtar ಆಗಿದ್ದರು. ಅವರಿದ್ದಾಗ ಹಗರಣಗಳೂ ಅಂದರೆ ಹಗರಗಣಗಳು. ಸಾಕಾಗಿ ಹೋಯಿತು. Jusitice ಶ್ರೀ ಚನ್ನಯ್ಯ ಮತ್ತು ಶ್ರೀ ವೆಂಕಟೇಶ್ ಎನ್ನುವ ಇಬ್ಬರು ಇದರ ತನಿಖೆ ಮಾಡಿ ವರದಿ ಕೊಟ್ಟರು. ತನಿಖೆ ಮಾಡಿ ಈ ಮಹಿಳಾ ವಿಶ್ವವಿದ್ಯಾನಿಲಯದ Vice Chancellor ಇಂತಿಂಥ ತಪ್ಪನ್ನು ಮಾಡಿದ್ದಾರೆ ಅವರ ಮೇಲೆ ಕ್ರಮ ಕೈಗೊಳ್ಳಬೇಕು, ಅವರಿಂದ ಹಣ ವಸೂಲಿ ಮಾಡಬೇಕೆಂದು ವರದಿಯನ್ನು ಕೊಟ್ಟರು. ಆದರೆ ಅವರು ಈ ದೇಶದಲ್ಲಿಯೇ ಇಲ್ಲ. ಅವರು ಇನ್ನು retired ಅಂತೂ ಆಗಿಲ್ಲ, ಆದರೆ ಅವರು ಈ ದೇಶದಲ್ಲಿಯೇ ಇಲ್ಲ. ಸರ್ಕಾರಗಳು ಎಷ್ಟು ಅಸಹಾಯಕವಾಗಿವೆಯೆಂದರೆ ...

ಅಧ್ಯಕ್ಷರು:- Retire ಆಗಿಲ್ಲವೇ?

ಶ್ರೀ ಗೋವಿಂದ ಎಂ. ಕಾರಜೋಳ:- Retired ಆಗಿದ್ದಾರೆ ಅಧ್ಯಕ್ಷರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- Sorry ಅವರು retired ಆಗಿದ್ದಾರೆ. ಆದರೆ ಅವರ enquiry report ನಲ್ಲಿ recovery ಆಗಬೇಕೆಂದು ಇದೆ. ಅವರು retired ಆದರೂ ಅವರಿಂದ recovery ಮಾಡಲಿಕ್ಕೆ ಏನೂ ತೊಂದರೆ ಇಲ್ಲ. ಆದರೆ ವಿದೇಶದಲ್ಲಿ ಹೋಗಿ ಅವರು ಕುಳಿತುಕೊಂಡಿರುವುದರಿಂದ ಯಾವುದೇ ನೋಟೀಸ್ ಸಹ ಅವರಿಗೆ ತಲುಪುವುದಿಲ್ಲ. ಈಗೇನಾಗುತ್ತಿದೆ ಎಂದರೆ, ಜನ ಎಷ್ಟು ಹಗುರವಾಗಿ ಮಾತನಾಡುವ ಸ್ಥಿತಿ ಬಂದಿದೆ ಎಂದರೆ ಇವರು ಮಾಡಬಾರದ ಅವ್ಯವಹಾರ, ಅಪರಾಧ ಎಲ್ಲಾ ಮಾಡುವುದು, retired ಆಗುತ್ತಾರಲ್ಲಾ ಆಗ ಅವರ benefits ಎಲ್ಲಾ ತೆಗೆದುಕೊಂಡು ವಿದೇಶಕ್ಕೆ ಹೋಗಿ ಕುಳಿತುಕೊಳ್ಳುವುದು. ಈ ದೊಡ್ಡ ಹುದ್ದೆಯಲ್ಲಿದ್ದವರಿಗೆ ವಿದೇಶಕ್ಕೆ ಹೋಗಿ ಕುಳಿತುಕೊಳ್ಳುವುದೇನೂ ದೊಡ್ಡದಲ್ಲ. ರಾಜ್ಯ ಸರ್ಕಾರ ಅವರಿಗೆ ಏನೂ ಮಾಡಲಿಕ್ಕಾಗುತ್ತಿಲ್ಲ. ಶ್ರೀಮತಿ ಸಯೀದಾ ಅಖ್ತರ್‌ರವರು ಮಾಡದೇ ಇರುವ ಹಗರಣವಿಲ್ಲ. ಈ ವಿಶ್ವವಿದ್ಯಾನಿಲಯ ಪ್ರಾರಂಭದಲ್ಲಿಯೇ ಬಾಲಗ್ರಹ ಪೀಡೆಗೆ ಒಳಗಾಯಿತು. ಈಗ ಒಳ್ಳೆಯ Vice-Chancellor ಬಂದಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ಒಳ್ಳೆಯ Vice-Chancellor ಈಗ ಏನು ಬಂದಿದ್ದಾರೆ, ಅವರಿಗೆ ಇನ್ನೂ ಹೆಚ್ಚಿನ ಹಣಕಾಸಿನ ನೆರವನ್ನು ಕೊಡಬೇಕು. ನನ್ನ ಪ್ರಕಾರ ಒಟ್ಟಾರೆ ವಿಶ್ವವಿದ್ಯಾನಿಲಯಗಳಿಗೆ ವರ್ಷಕ್ಕೆ ಹತ್ತರಿಂದ ಹನ್ನೊಂದೂವರೆ ಕೋಟಿ ರೂಪಾಯಿಗಳವರೆಗೆ ಸಿಗುತ್ತಿದೆ. ಈಗ ಈ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದಂತೆ ನಾನು ಹೇಳುತ್ತಿದ್ದೇನೆ. ಮಹಿಳೆಯರ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡಬೇಕು. ಪುರುಷರಲ್ಲಿ ಅಕ್ಷರಸ್ಥರ ಸಂಖ್ಯೆ ಶೇ. 82 ರಷ್ಟು ಇದ್ದರೆ, ಮಹಿಳೆಯರಲ್ಲಿ ಅದು ಇನ್ನೂ 68% ಇದೆ. ಅದು ಇನ್ನೂ ಹೆಚ್ಚಾಗಬೇಕು ಎಂಬ ಧ್ಯೇಯೋದ್ದೇಶ ಇಟ್ಟುಕೊಳ್ಳಲಾಗಿದೆ. ಇಷ್ಟೇ ಹಣಕಾಸಿನ ನೆರವನ್ನು ಕೊಟ್ಟರೆ ಇದಕ್ಕೆ ಯಾರೂ affiliation ಆಗುವುದಕ್ಕೆ ನೋಡುವುದಿಲ್ಲ. ಏಕೆಂದರೆ, ಅಲ್ಲಿ ಯೂನಿವರ್ಸಿಟಿಗೆ ಬೇಕಾಗಿರುವ infrastructure develop ಆಗಿಯೇ ಇಲ್ಲ. Develop ಮಾಡುವುದಕ್ಕೆ ಅವಕಾಶವಿದೆ. ಈಗಿರುವ Vice-Chancellor ಒಳ್ಳೆಯವರಾಗಿದ್ದಾರೆ ಎಂಬ ವಿಶ್ವಾಸ ನಮಗಿದೆ. ನಾವು ಹೆಚ್ಚಿನ ಹಣಕಾಸಿನ ನೆರವನ್ನು ಕೊಟ್ಟು, ಈ ವಿಶ್ವವಿದ್ಯಾನಿಲಯವನ್ನು ಇನ್ನೂ ಹೆಚ್ಚು

ಬಲಗೊಳಿಸಬೇಕಾದಂತಹ ಅಗತ್ಯತೆಯಿದೆ. ಆ ದಿಕ್ಕಿನಲ್ಲಿ ಪ್ರಯತ್ನ ಮಾಡಬೇಕು. ಮತ್ತೆ ಇನ್ನೆರಡು ವಿಷಯವನ್ನು ಹೇಳಬಯಸತ್ತೇನೆ. ಅವುಗಳನ್ನು ನಮ್ಮ ನಾಯಕರೂ ಸಹ ಪ್ರಸ್ತಾಪ ಮಾಡಿದರು. ಆ ನಾಲ್ಕು ಕಾಲೇಜುಗಳನ್ನು ನೀವು ಏನು independent status ನಲ್ಲಿ ಯೂನಿವರ್ಸಿಟಿ ಮಾಡಬೇಕೆಂದು ಇದ್ದೀರಿ, ಬೆಂಗಳೂರಿನಲ್ಲಿ ಒಂದು ಹಾಗೂ ಮೈಸೂರಿನಲ್ಲಿ ಒಂದು ಏನು ಮಾಡಬೇಕೆಂದಿದ್ದೀರಿ, ಅವೆರಡು ಯೂನಿವರ್ಸಿಟಿಗಳಾದರೆ, ಆ ಯೂನಿವರ್ಸಿಟಿ independent ಆಗಿರುತ್ತದೋ ಅಥವಾ ಮತ್ತೆ ಉಳಿದ ಕಾಲೇಜುಗಳು ಸಹ ಅದಕ್ಕೆ affiliation ಮಾಡಿ, ಮತ್ತೆ bifurcation ಏನಾದರೂ ಆಗುತ್ತದಯೇ? ಎಂಬ ಬಗ್ಗೆ ಸ್ಪಷ್ಟೀಕರಣ ಬೇಕು. ಇಲ್ಲದಿದ್ದರೆ ತೊಂದರೆಯಾಗುತ್ತದೆ. ಹೆಚ್ಚಿನ ಹಣಕಾಸಿನ ನೆರವು ಕೇಂದ್ರದಿಂದ ಬರುತ್ತದೆ ಎಂಬುದು ನಿಜ. ಇದಲ್ಲದೆ ಮೈಸೂರಿನಲ್ಲಿ ಒಂದು ಹಾಗೂ ಬೆಂಗಳೂರಿನಲ್ಲಿ ಒಂದು independent university ಮಾಡಬೇಕಾಗುತ್ತದೆ. ಈ ಕಾಲೇಜುಗಳು ಆಗಲ್ಲಿಗೆ ಬರುತ್ತದೋ ಇಲ್ಲವೋ ಅದು ನನಗೆ ಗೊತ್ತಿಲ್ಲ. ಆದರೆ, ಅದು ಏನು ಎನ್ನುವುದನ್ನು ಸ್ಪಷ್ಟೀಕರಣಗೊಳಿಸಬೇಕು ಎನ್ನುವುದನ್ನು ಹೇಳುತ್ತೇನೆ. Aided, un-aided ಗಳಿಗೆ ಈ ಆರು ತಿಂಗಳುಗಳೊಳಗೆ ಇದಕ್ಕೆ affiliation ಆಗಬೇಕು, ಇಲ್ಲ ಎಂದರೆ ಇಲ್ಲ ಎನ್ನುವುದೇನಿದೆ, ಅದನ್ನು ತಾವು ಬಿಗಿ ಮಾಡಬೇಕು. ಇಲ್ಲದಿದ್ದರೆ ಯಾರೂ ಕೂಡ ಇದಕ್ಕೆ affiliation ಆಗುವುದೇ ಇಲ್ಲ. ಆ ರೀತಿ ಒಂದು ಪರಿಸ್ಥಿತಿ ಕೂಡ ಬರಬಹುದು ಎನ್ನುವುದರ ಹಿನ್ನೆಲೆಯಲ್ಲಿ, ಆರು ತಿಂಗಳುಗಳಲ್ಲಿ ಎಲ್ಲರೂ compulsory ಯಾಗಿ affiliation ತೆಗೆದುಕೊಳ್ಳಬೇಕು ಎನ್ನುವ ಒಂದು condition ಇರಬೇಕು. ಎನ್ನುವುದನ್ನು ಸಹ ನಾನು ಈ ಸಂದರ್ಭದಲ್ಲಿ ಆಗ್ರಹಿಸುತ್ತಿದ್ದೇನೆ. ಆ ಮಹಿಳಾ ವಿಶ್ವವಿದ್ಯಾನಿಲಯ ಬಲಗೊಳ್ಳಬೇಕು ಎನ್ನುವುದಾದರೆ ಅಲ್ಲಿರುವಂತಹ ಮೂಲಭೂತ ಸೌಕರ್ಯ ಹೆಚ್ಚಿಸುವುದಕ್ಕೆ ಹಣಕಾಸಿನ ನೆರವನ್ನೂ ಕೊಡಬೇಕು ಎನ್ನುವಂತಹ ಆಗ್ರಹವನ್ನೂ ಸಹ ನಾನು ಮಾಡುವುದಕ್ಕೆ ಬಯಸುತ್ತೇನೆ. ಒಟ್ಟಾರೆಯಾಗಿ ರಾಜ್ಯ ವ್ಯಾಪ್ತಿಗೆ ಏನು ತರುತ್ತಿದ್ದಾರೆ, ಇದು ಸ್ವಾಗತಾರ್ಹವಾದುದು. ಮಂಡ್ಯದಲ್ಲಿ ಒಂದು extension center ಅನ್ನು ಏನು ತರುತ್ತಿದ್ದಾರೆ, ಇದೂ ಕೂಡ ಒಳ್ಳೆಯದು. ಆದರೆ, ಇದನ್ನೂ ಬಿಗಿಯಾಗಿ

ಅನುಷ್ಠಾನಗೊಳಿಸಬೇಕು. Aided, unaided ನವರಿಗೆ ಕಾಲಮಿತಿ ಏನು ಕೊಟ್ಟಿದೆ, ಇದನ್ನು compulsory ಪಾಲಿಸುವಂತೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ):- ಮಾನ್ಯ ಅಧ್ಯಕ್ಷರೆ, 2003 ರಲ್ಲಿ ಪ್ರಾರಂಭವಾಗಿರುವಂತಹ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಇವತ್ತಿನವರೆಗೂ ಯಾವುದೇ ರೀತಿಯಾದಂತಹ development ಆಗಲಿಲ್ಲ. ನಮ್ಮ ಸರ್ಕಾರ ಇದ್ದಂತಹ ಸಂದರ್ಭದಲ್ಲಿ 35 ಕೋಟಿ ರೂಪಾಯಿಗಳನ್ನು ಕೊಡತಕ್ಕಂತಹ ಪ್ರಯತ್ನವನ್ನು ಮಾಡಿದ್ದೆವು. ಅದರಲ್ಲಿಯೂ ಕೂಡ ಹಣ ಬಿಡುಗಡೆ ಮಾಡದೇ, ಇಲ್ಲಿರತಕ್ಕಂತಹ ವಿಧಾನಸೌಧದಲ್ಲಿ ಕುಳಿತಿರುವಂತಹ ಬೃಹಸ್ಪತಿಗಳು March end ಗೆ re-appropriation ಮಾಡಿಕೊಂಡರು. ಇಂತಹ ಒಂದ ಪರಿಸ್ಥಿತಿ ಅಲ್ಲಿದೆ. ಅದಕ್ಕೆ ನಾನು ಉನ್ನತ ಶಿಕ್ಷಣ ಸಚಿವರಿಗೆ ಏನು ವಿನಂತಿ ಮಾಡುತ್ತೇನೆ ಎಂದರೆ, ಮೊನ್ನೆ ವಿರೋಧ ಪಕ್ಷದ ನಾಯಕರು ಮಾತನಾಡಿದಂತಹ ಸಂದರ್ಭದಲ್ಲಿ 6 ತಿಂಗಳುಗಳ ಅವಕಾಶ ಕೊಡಬೇಡಿ ಎಂದು ಏನು ಹೇಳಿದರು, 6 ತಿಂಗಳುಗಳ ಕಾಲ ಅವರು ಬೇರೆ ಯೂನಿವರ್ಸಿಟಿಗೆ affiliation ಮಾಡುವುದಕ್ಕೆ ಅವಕಾಶ ಕೊಡಬಾರದು. ಇಡೀ ರಾಜ್ಯಕ್ಕೆ ಒಂದೇ ಮಹಿಳಾ ವಿಶ್ವವಿದ್ಯಾನಿಲಯ ಇರಬೇಕು. ಇವತ್ತು ನಾವು ಭೀಮಾ ನದಿ ದಂಡೆಯಿಂದ ಇಲ್ಲಿಗೆ ಬರುತ್ತೇವೆ, ಔರಾದ್‌ನಿಂದ ಬೆಂಗಳೂರಿಗೆ ಬರುತ್ತೇವೆ. ಇವರೂ ಸಹ ಒಂದು ಸಲ ಅಲ್ಲಿಗೆ ಬರಲಿ ಸರ್. ನಮ್ಮದು ಏನಿದೆ ಎನ್ನುವುದನ್ನು ಅವರು ನೋಡಲಿ. ಉತ್ತರ ಕರ್ನಾಟಕದ ಪರಿಸ್ಥಿತಿ ನೋಡಲಿ. ಬಿಜಾಪುರದಲ್ಲಿ ಏನಿದೆ ಎಂಬುದನ್ನು ನೋಡಲಿ. ಏಕೆಂದರೆ, ಇಲ್ಲಿ ಕುಳಿತುಕೊಂಡು ಬೃಹಸ್ಪತಿಗಳು ಹಣ ಬಿಡುಗಡೆ ಮಾಡಲಿಕ್ಕೆ ಭಯಂಕರ ತೊಂದರೆ ಕೊಡುತ್ತಾರೆ. ಈ ಮಹಿಳಾ ವಿಶ್ವವಿದ್ಯಾನಿಲಯ ವಿಷಯ ಕುರಿತಂತೆ ನಾನೇ ಸಾಕಷ್ಟು ಸಲ ಹಣಕಾಸಿನ ಇಲಾಖೆಗೆ ಹಾಗೂ ಶಿಕ್ಷಣ ಇಲಾಖೆಯವರಿಗೆ ನೂರೆಂಟು ಸಲ ಫೋನ್ ಮಾಡಿರಬೇಕು, ಪ್ರತಿ ವರ್ಷ ಫೋನ್ ಮಾಡುತ್ತಲೇ ಇರುತ್ತೇನೆ, ಹಣ ಬಿಡುಗಡೆ ಮಾಡುವುದೇ ಇಲ್ಲ. ಬಜೆಟ್‌ನಲ್ಲಿ ತೋರಿಸಿದ್ದನ್ನು ಡಿಸೆಂಬರ್, ಜನವರಿಯಲ್ಲಿ re-

appropriation ಮಾಡಿಕೊಂಡು ಬಿಡುತ್ತಾರೆ. ಹೀಗಾಗಿ ಅದು development ಆಗಿಲ್ಲ. ಅದಕ್ಕಾಗಿ ಮಾನ್ಯ ಸಭಾಧ್ಯಕ್ಷರಲ್ಲಿ ನಾನು ಏನು ವಿನಂತಿ ಮಾಡುತ್ತೇನೆ ಎಂದರೆ, 50 ಕೋಟಿ ರೂಪಾಯಿಗಳನ್ನು ಈ ಮಹಿಳಾ ವಿಶ್ವವಿದ್ಯಾನಿಲಯಕ್ಕೆ ಕೊಡಲಿ. ನಾವು ಲಕ್ಷ-ಲಕ್ಷ ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಇಡುತ್ತೇವೆ. ಅದಕ್ಕೆ 50 ಕೋಟಿ ರೂಪಾಯಿಗಳನ್ನು ಕೊಟ್ಟರೆ development ಆಗುತ್ತದೆ. ಸಿಟಿಯಲ್ಲಿ ಯೂನಿವರ್ಸಿಟಿಗೆ 300 ಎಕರೆ ಜಮೀನು ಜಾಗ ಕೊಟ್ಟಿದ್ದಾರೆ, ಅದನ್ನು ಮಾಡುವುದಕ್ಕೆ ಆಗುತ್ತಿಲ್ಲ. ಬೆಂಗಳೂರಿನ ವಿಧಾನಸೌಧದಲ್ಲಿ ಕುಳಿತವರು, ಎಂ.ಎಸ್. ಬಿಲ್ಡಿಂಗ್‌ನಲ್ಲಿ ಕುಳಿತವರು ಹಾಗೂ ವಿಕಾಸಸೌಧದಲಲಿ ಕುಳಿತವರು ಸಹ ಒಂದು ಸಲ ನಮ್ಮ ಊರನ್ನು ಸಹ ನೋಡಲಿ. ನಾನು ಸರ್ಕಾರಕ್ಕೆ ವಿನಂತಿ ಮಾಡುವುದು ಏನೆಂದರೆ, ದಯವಿಟ್ಟು ತಿದ್ದುಪಡಿ ಮಾಡುವ ಸಂದರ್ಭದಲ್ಲಿ ಈ ರೀತಿ condition ಹಾಕಿರುವುದನ್ನು ತೆಗೆಯಿರಿ. ನಾವು ಸರ್ವಾನುಮತದಿಂದ ಬಿಲ್ ಪಾಸ್ ಮಾಡಿಕೊಡುತ್ತೇವೆ. ದಯವಿಟ್ಟು 6 ತಿಂಗಳುಗಳ ಅವಕಾಶ ಎನ್ನುವುದನ್ನು delete ಮಾಡಿ. ಮಾನ್ಯ ಕಾಗೇರಿಯವರರು ಹೇಳಿದಂತೆ, ಮಹಿಳಾ ವಿಶ್ವವಿದ್ಯಾನಿಲಯದ ಮೊದಲನೇ ಉಪ ಕುಲಪತಿಗಳಾಗಿ ಶ್ರೀಮತಿ ಸಯೀದಾ ಅಖ್ತರ್‌ರವರು ಏನಿದ್ದರು, ಅವರು ಮಾಡಿದಂತಹ ಹಗರಣ ಅಷ್ಟಿಷ್ಟಲ್ಲ. ಸಾವಿರಾರು ಮಂದಿಯನ್ನು illegal ಆಗಿ appointment ಮಾಡಿ ಹೋಗಿ ಬಿಟ್ಟಿದ್ದಾರೆ. Roaster maintain ಮಾಡಲಿಲ್ಲ, ಅವರ qualification ನೋಡಲಿಲ್ಲ, ಅವರ Education ನೋಡಲಿಲ್ಲ, ಯಾರು ಬಂದು ಅರ್ಜಿ ಕೊಡುತ್ತಾರೆ, ಯಾರು ಬಂದು ದುಡ್ಡು ಕೊಡುತ್ತಾರೆ ಅವರನ್ನು ನೇಮಕಾತಿ ಮಾಡಿದ್ದಾರೆ. ಇದರ ಬಗ್ಗೆ ಬೇಕಾದಷ್ಟು ಸಲ ಪೇಪರ್‌ನಲ್ಲಿ ಬಂತು, enquiry ಆಯಿತು, ಅಲ್ಲಿ ಧರಣಿಗಳು ಆದವು, ಪ್ರತಿಭಟನೆಗಳಾದವು. ಆದರೂ ಕೂಡ ಯಾವುದೇ ಸರ್ಕಾರ, ಕೇವಲ ಇವತ್ತಿನ ಸರ್ಕಾರವೆಂದು ಅಲ್ಲ . .

(ಗೊಂದಲ)

ಶ್ರೀ ಕೆ. ಶಿವಮೂರ್ತಿ:- ಒಬ್ಬರು ಮುಸ್ಲಿಂ ಹೆಣ್ಣುಮಗಳು Vice-Chancellor ಆದರು ಎಂದು ಕುರ್ಚಿಯ ಮೇಲೆ ಕುಳಿತುಕೊಳ್ಳುವುದಕ್ಕೆ

ಬಿಡಲಿಲ್ಲ ಅಷ್ಟು ರೀತಿಯಲ್ಲಿ ಕಿರುಕುಳ ಕೊಟ್ಟರು. She is a minority. ಒಬ್ಬ ಮುಸ್ಲಿಂ ಹೆಣ್ಣುಮಗಳನ್ನು Vice-Chancellor ಆಗಿ ಕೆಲಸ ಮಾಡುವುದಕ್ಕೆ ಬಿಡಲಿಲ್ಲ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ಒಂದು ನಿಮಿಷ ಸರ್. ನೀವು ಮಾತನಾಡುವಾಗ ಮಾತನಾಡಿ.. ಮೊದಲನೆಯದಾಗಿ ಅದರ ಬಗ್ಗೆ enquiry ಆಗಿ ಕ್ರಮ ಜರುಗಿಸಬೇಕೆಂದು ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತೇನೆ. ಎರಡನೆಯದಾಗಿ, ಈ ವಿಶ್ವವಿದ್ಯಾನಿಲಯಗಳಿಗೆ ಕಟ್ಟಡಗಳನ್ನು ಕಟ್ಟಿಸಲು Vice-Chancellor ರವರಿಗೆ ಹೇಳಿ ಅವರನ್ನು ಏನು contractor ರೀತಿ ಮಾಡಿದ್ದೀರಿ, ಅದನ್ನು ತೆಗೆಯಬೇಕು. ನೀವು ಕಟ್ಟಡ ಕಟ್ಟಿಸಲು ದುಡ್ಡು ಕೊಡುತ್ತೀರಿ. Vice-Chancellor ರವರು ಯೂನಿವರ್ಸಿಟಿಯ academic interest ನಲ್ಲಿ ಕೆಲಸ ಮಾಡುವುದಿಲ್ಲ. ಕೇವಲ building ಕಟ್ಟಿಸುವುದು ಹಾಗೂ purchases ಕಡೆಗೆ ಮಾತ್ರ ಲಕ್ಷ್ಯ ಕೊಡುತ್ತಾರೆ. ಉದಾಹರಣೆಗೆ ನಮ್ಮ ಬಾಗಲಕೋಟೆಯ ತೋಟಗಾರಿಕೆಯ ವಿಶ್ವವಿದ್ಯಾನಿಲಯವನ್ನು ತೆಗೆದುಕೊಳ್ಳಿ. ಅದನ್ನು ನಾವೇ ಪ್ರಾರಂಭ ಮಾಡಿದೆವು. ಅಲ್ಲಿ Vice-Chancellor ಏನಿದ್ದರು, ಅವರು contractor ಆಗಿ ಕೆಲಸ ಮಾಡಿದರೇ ಹೊರತು ವಿಶ್ವವಿದ್ಯಾನಿಲಯದ ಉಪ ಕುಲಪತಿಗಳಾಗಲಿಲ್ಲ. ಅಲ್ಲಿ ಯಾವುದೇ ಹೊಸ ಹೊಸ ತಳಿಗಳನ್ನು ಹುಡುಕುವಂತಹ ಕೆಲಸ ಮಾಡಲಿಲ್ಲ, ಸಂಶೋಧನೆ ಮಾಡಲಿಲ್ಲ. ಅದಕ್ಕೆ ನಾನು ಸರ್ಕಾರಕ್ಕೆ ಏನು ವಿನಂತಿ ಮಾಡುತ್ತೇನೆ ಎಂದರೆ, ಅವರನ್ನು contractor ಆಗುವುದನ್ನು ಬಿಡಿಸಿ. PWD ಇಲಾಖೆಯಿದೆ, ಮತ್ತೊಂದು ಇಲಾಖೆಯಿದೆ, ಅವರಿಗೆ ದುಡ್ಡು ಕೊಟ್ಟು ಕೆಲಸ ಮಾಡಿಸಿ.

ಶ್ರೀ ಕೆ.ಆರ್. ರಮೇಶ್ ಕುಮಾರ್:– ಮೊದಲು Vice-Chancellor ಗಳಾಗಲು ಅರ್ಹತೆ ಇರುವವರನ್ನು ಸರ್ಕಾರ ಹುಡುಕಿ ಪ್ರಯತ್ನ ಮಾಡಿ, ಗೌರವಸ್ಥರವನ್ನು ಆಹ್ವಾನ ಕೊಟ್ಟು ಕರೆಯುತ್ತಿತ್ತು. ಈಗ canvas ಮಾಡಿಕೊಂಡು Vice-Chancellors ಗಳಾಗುತ್ತಿದ್ದಾರೆ. ಅವರೂ canvas

ಮಾಡಿಕೊಂಡು ಬರುವುದೇ contractor ಕೆಲಸ ಮಾಡುವುದಕ್ಕೆ ನೀವು ಇದ್ದರೂ ಅಷ್ಟೆ. ನಾವಿದ್ದರೂ ಅಷ್ಟೆ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:- ರಮೇಶ್ ಕುಮಾರ್‌ರವರೆ, ಅದನ್ನೇ ಹೇಳುವುದಕ್ಕೆ ನಾನು ಹೊರಟಿದ್ದೆ. ಏನೆಂದರೆ ಈಗ ಏನಾಗಿದೆ ಎಂದರೆ, ನಮ್ಮ ರಾಜ್ಯದಲ್ಲಿರುವ ವಿಶ್ವವಿದ್ಯಾನಿಲಯಗಳ ಸಂಖ್ಯೆ ನೋಡಿದರೆ ನಿಮಗೇ ಆಘಾತವಾಗುತ್ತದೆ. ಎಂಥೆಂಥದಕ್ಕೋ ನಾವು ವಿಶ್ವವಿದ್ಯಾನಿಲಯಗಳನ್ನು ಸೃಷ್ಟಿ ಮಾಡುತ್ತಿರುವ ರೀತಿಯನ್ನು ನೋಡಿದರೆ ಭಯವಾಗುತ್ತದೆ. ಕೆಲವರನ್ನು ಉಪ ಕುಲಪತಿಗಳನ್ನು ಮಾಡಬೇಕೆಂಬ ಉದ್ದೇಶ ಇಟ್ಟುಕೊಂಡೇ, ಒಂದು ಯೂನಿವರ್ಸಿಟಿಯನ್ನು ಮಾಡುವುದಕ್ಕೆ ನಾವು ಹೊರಟುಬಿಟ್ಟಿದ್ದೇವೆ. ಇದು ಒಂದು ದೊಡ್ಡ ಆಘಾತಕಾರಿಯಾಗಿರುವಂತಹ ವಿಷಯ. ಹಾಗಾಗಿ ಮೊದಲಿಗೆ ಒಂದು ಸಲ ಇದರ ಬಗ್ಗೆ ಪರಿಷ್ಕರಣೆಯಾಗಿರುವಂತಹ ವಿಷಯ. ಹಾಗಾಗಿ ಮೊದಲಿಗೆ ಒಂದು ಸಲ ಇದರ ಬಗ್ಗೆ ಪರಿಷ್ಕರಣೆಯಾಗಬೇಕಾಗಿದೆ. ಎಷ್ಟು ಯೂನಿವರ್ಸಿಟಿಗಳ ಸಂತೆಯಿದೆ ಎಂದರೆ, ಇದಕ್ಕೆ ಅರ್ಥವಿಲ್ಲ, ಕಿಮ್ಮತ್ತಿಲ್ಲ, ಘನತೆಯಿಲ್ಲ, ಎಂತಹದ್ದೂ ಇಲ್ಲ. Vice-Chancellors ಗಳ ಕಡತವನ್ನು ನೀವು ತೆಗೆದುಕೊಳ್ಳಿ. ಎಲ್ಲಾ ಯೂನಿವರ್ಸಿಟಿಗಳಲ್ಲಿ ಹೆಚ್ಚು-ಕಡಿಮೆ ಎಲ್ಲರ ಮೇಲೆಯೂ ಆಪಾದನೆಯಿದೆ. ಅದರಲ್ಲಿಯೂ ಮಹಿಳಾ ವಿಶ್ವವಿದ್ಯಾನಿಲಯದಂತೂ ಇನ್ನೂ ಜಾಸ್ತಿಯಿದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್:- ಇದು ಕೇವಲ ಯೂನಿವರ್ಸಿಟಿಗಳಿಗೆ ಮಾತ್ರವೇ confine ಆಗುತ್ತದೆಯೇ? ಸರ್ಕಾರದಲ್ಲಿ ಇರುವ ಇಲಾಖೆಗಳು, ಮಂತ್ರಿಗಳ ಇಲಾಖೆಗಳು, ಬೇರೆ ಬೇರೆ Director ಗಳು, Chief Engineers, D.G. ಗಳು ಇವರೆಲ್ಲರಿಗೂ ಇದು ಅನ್ವಯಿಸುತ್ತದೆ.

ಶ್ರೀ ವೈ.ಎಸ್.ವಿ. ದತ್ತಾ:- ಹೌದು, ಇದು ಎಲ್ಲರಿಗೂ ಅನ್ವಯಿಸುತ್ತದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್:- ಒಟ್ಟಾರೆಯಾಗಿ ಎಲ್ಲಾ ಕಡೆ ಏನು ಮಾಡಿದ್ದೇವೆ ಎಂದರೆ, political expediency ಗೋಸ್ಕರ ನಮಗೆ

ಬೇಕಾದವರನ್ನು accommodate ಮಾಡುವುದಕ್ಕೆ mutual ಆಗಿ ಇವೆಲ್ಲವನ್ನೂ ಬೆಳೆಸಿಕೊಂಡು ಹೋಗುತ್ತಿದ್ದೇವೆ. ನಾವು Constable ಗಳ strength ಅನ್ನು increase ಮಾಡುತ್ತೇವಾ? ಮಾಡುವುದಿಲ್ಲ. ADG ಗಳು ಹಾಗೂ D.G. ಗಳ ಸಂಖ್ಯೆ ಜಾಸ್ತಿ ಮಾಡುತ್ತೇವೆ. ಅವರೇನೂ field ಗೆ ಹೋಗುವುದಿಲ್ಲ, ಕೆಲಸ ಮಾಡುವುದಿಲ್ಲ. ಆ Forest Department ನಲ್ಲಿ ಎಷ್ಟು ಜನರಿದ್ದಾರೆ ಗೊತ್ತಾ/ ಅದೆಂತಹದ್ದೋ Additional, Principal, Chief Principal, Principal Chief ಹೀಗೆ ಹಲವರು ಇದ್ದಾರೆ. ತಲೆ ಕೆಟ್ಟು ಹೋಗಿಬಿಡುತ್ತದೆ. See not just in respect of Universities.

ಅಧ್ಯಕ್ಷರು:– ಮಾನ್ಯ ದತ್ತಾರವರೆ, ಬೇಗ ಹೇಳಿ.

ಶ್ರೀ ವೈ.ಎಸ್.ವಿ. ದತ್ತಾ:– ಮಾನ್ಯ ಅಧ್ಯಕ್ಷರೆ, ನಾನು ಇಷ್ಟೇ ಹೇಳಿದ್ದು. ಮಂಡ್ಯದ ಬಗ್ಗೆ ನಮ್ಮ ಒಪ್ಪಿಗೆಯಿದೆ, ಸಹಮತವಿದೆ, ಒಳ್ಳೆಯದು. ಆದರೆ, ನೀವು ಇನ್ನೊಂದು ಸಲ ಈ ವಿಶ್ವವಿದ್ಯಾನಿಲಯಗಳ ಅಗತ್ಯತೆ, ಅನಿವಾರ್ಯತೆ, ಸಂಖ್ಯೆ, ಸಾಧಕ–ಬಾಧಕ ಅವುಗಳಿಗೆ ಮಾಡಿರುವುದರ ಹಿನ್ನೆಲೆ, ಇದರ ಬಗ್ಗೆ ಒಂದು ವ್ಯಾಪಕವಾದ ಚರ್ಚೆಯಾಗಬೇಕು. ಏಕೆಂದರೆ, ನಾನು ಇಸವಿ ಹೇಳುವವುದಕ್ಕೆ ಹೋದರೆ ಕೆಲವರ ಮನಸ್ಸಿಗೆ ಬೇಜಾರಾಗುತ್ತದೆ. ನಾನು ಹೇಳುವುದಕ್ಕೆ ಹೋಗುವುದಿಲ್ಲ. ಎಷ್ಟೊಂದು ವಿಶ್ವವಿದ್ಯಾನಿಲಯಗಳನ್ನು ನಾವು ಮಾಡಿದೆವು. ಒಂದು ಕಾಲಘಟ್ಟದಲ್ಲಿ ಬಿಕರಿ ಮಾಡಿದ ಹಾಗೆ ಮಾಡಿಬಿಟ್ಟೆವು. ನನಗೆ ಅದರ ಬಗ್ಗೆ ತುಂಬಾ ನೋವಿದೆ.

ಅಧ್ಯಕ್ಷರು:– O.k., ಆಯಿತು. ಸಾಕು ಬಿಡಿ.

ಅಧ್ಯಕ್ಷರು:– ರವಿಯವರೆ, ತಿದ್ದುಪಡಿ ಮೇಲೆ ಮಾತನಾಡಿ. ನೀವು ವಿಶ್ವವಿದ್ಯಾನಿಲಯದ ವ್ಯಾಪಕ ಆಡಳಿತದ ಬಗ್ಗೆ ಮಾತನಾಡಬೇಕಾದರೆ ಶಿಕ್ಷಣ ಇಲಾಖೆಯ ಬಗ್ಗೆ ಚರ್ಚೆ ಬಂದಾಗ ಅದರ ಬಗ್ಗೆ ಮಾತನಾಡಿ.

ಶ್ರೀ ಸಿ.ಟಿ. ರವಿ:– ನಾನು to the point ಮಾತನಾಡುತ್ತೇನೆ.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು):– ಮಾನ್ಯ ಅಧ್ಯಕ್ಷರೆ, ಆ ಇಲಾಖೆಯಲ್ಲಿ ನಾನು ಕೂಡ ಕೆಲವು ಕಾಲ ಸಚಿವನಾಗಿ ಕೆಲಸ ಮಾಡಿದ್ದೇನೆ.

ಈ ಮಸೂದೆಯನ್ನು ತಂದಿರುವಂತಹ ಉದ್ದೇಶವೇನು? Knowledge Commission recommendation ಪ್ರಕಾರ ಸಂಕೀರ್ಣತೆಯಾಗಿರುವುದನ್ನು, ವ್ಯಾಪ್ತಿಯನ್ನು ಚಿಕ್ಕದು ಮಾಡಬೇಕೆಂದು ಹೇಳುತ್ತದೆ, ಜಿಲ್ಲೆಗೊಂದು ವಿಶ್ವವಿದ್ಯಾಲಯವನ್ನು ತರಬೇಕೆಂದು ಹೇಳಿದ್ದು, ಆ ರೀತಿಯಲ್ಲಿಯೇ ಪ್ರಯತ್ನ ಮಾಡಿ ಎಂದು ಹೇಳಿದೆ. ಮಹಿಳಾ ವಿಶ್ವವಿದ್ಯಾನಿಲಯದ ಭೌಗೋಳಿಕ ವ್ಯಾಪ್ತಿಯನ್ನಷ್ಟೆ ಜಾಸ್ತಿ ಮಾಡಬೇಕೇ? ಮಹಿಳಾ ವಿಶ್ವವಿದ್ಯಾನಿಲಯದ ಸ್ಥಾಪನೆಯ ಉದ್ದೇಶವೇನು? ಮಹಿಳಾ ವಿಶ್ವವಿದ್ಯಾನಿಲಯ ಮಹಿಳೆಯರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಅಧ್ಯಯನ ಮಾಡುವಂತಹ ಒಂದು ವಿಶ್ವವಿದ್ಯಾಲಯವಾಗಿ ಪರಿವರ್ತನೆಯಾಗಬೇಕು. ಅದರ ಬದಲಿಗೆ general ಆಗಿ ಒಂದು ಡಿಗ್ರಿ ಸರ್ಟಿಫಿಕೆಟ್ ಕೊಡುವಂತಹ ವಿಶ್ವವಿದ್ಯಾನಿಲಯವಲ್ಲ. ಕ್ನಡ ವಿಶ್ವವಿದ್ಯಾಲಯ, ಜಾನಪದ ವಿಶ್ವವಿದ್ಯಾಲಯ, ತೋಟಗಾರಿಕೆ ವಿಶ್ವವಿದ್ಯಾಲಯ ಎಂದರೆ ಅವುಗಳಿಗೆಲ್ಲಾ ಒಂದು ಉದ್ದೇಶವಿದೆ. ಮಹಿಳಾ ವಿಶ್ವವಿದ್ಯಾಲಯಕ್ಕೂ ಕೂಡ ಒಂದು ಉದ್ದೇಶ ಇದೆ. General ಆಗಿ ಒಂದು ಡಿಗ್ರಿ ಸರ್ಟಿಫಿಕೇಟ್ ಕೊಡುವುದಲ್ಲ. ಈಗ ನೀವು ಇಡೀ ರಾಜ್ಯ ವ್ಯಾಪಿ ಮಾಡುತ್ತಿದ್ದೀರಿ. ಹಗರಣಗಳಿಲ್ಲದಿರುವ ವಿಶ್ವವಿದ್ಯಾಲಯಗಳು ಈಗ ಇಲ್ಲ. ಪೋಲಿಸ್ ಕಾನ್ಸ್ಟೇಬಲ್ ಪರೀಕ್ಷೆಯನ್ನು ಕೂಡ ಹಗರಣವಿಲ್ಲದೆ ಮಾಡಲಾರದಂತಹ ಸ್ಥಿತಿಗೆ ನಾವು ತಲುಪಿದ್ದೇವೆ. ನಾಳೆ ಬೆಳಿಗ್ಗೆ question paper ತಯಾರಾಗುವುದು, answer sheet ಇಲ್ಲಿಂದ ಅಲ್ಲಿಗೆ ಹೋಗಬೇಕು. ಯಾವ ಪರಿಸ್ಥಿತಿ ನಿರ್ಮಾಣವಾಗುತ್ತದೆಂಬ ಬಗ್ಗೆ ಯೋಚನೆ ಮಾಡಿದ್ದೀರಾ? ಹಾಗಾಗಿ ಇದರ ಉದ್ದೇಶವೇ Knowledge Commission recommendation ವಿರುದ್ಧವಿದೆ. ನೀವೊಮ್ಮೆ Knowledge Commission recommendation ಏನೆಂದು ಪರಿಶೀಲಿಸಿ, ಇದನ್ನು ನೋಡಿ ನಾವು ಹೆಚ್ಚೆಚ್ಚು ಸರಳ ಮಾಡುತ್ತಾ ಹೋಗಬೇಕೇ ಹೊರತು, ಹೆಚ್ಚು ಸಂಕೀರ್ಣ ಮಾಡುವ ಕೆಲಸವಾಗಬಾರದು. ನೀವು ರಾಜ್ಯವ್ಯಾಪಿ ಕೊಡಬೇಕು ಎಂಬುದರ ಒಳಗೆ ಇದು ಸಂಕೀರ್ಣ ಮಾಡುತ್ತದೆ. ಮತ್ತು General degree certificate ಕೊಡುವಂತಹ ಮತ್ತೊಂದು ವಿಶ್ವವಿದ್ಯಾಲಯವಾಗುತ್ತದೆ. ಆ ರೀತಿ ಆಗುವುದು ಬೇಡ. ಮಹಿಳಾ ವಿಶ್ವವಿದ್ಯಾಲಯದ ಸ್ಥಾಪನೆಯ

ಉದ್ದೇಶವಿರುವುದೇ ಮಹಿಳೆಯರ ಎಲ್ಲ ರೀತಿಯ ಅಧ್ಯಯನ ಎಂದರೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಅಧ್ಯಯನ ಮಾಡುವಂತಹ ಮತ್ತು ಅದಕ್ಕೆ ಬೇಕಾಗುವಂತಹ faculty ಗಳನ್ನು ನಿರ್ಮಾಣ ಮಾಡುವಂತಹ ವ್ಯವಸ್ಥೆ ಆಗಬೇಕೇ ವಿನಃ ಕೇವಲ general degree ಕೊಡುವುದಕ್ಕಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಮತ್ತೊಮ್ಮೆ ಇದನ್ನು ಪರಾಮರ್ಶೆ ಮಾಡಬೇಕೆಂಬ ವಿನಂತಿಯನ್ನು ಮಾಡುತ್ತೇನೆ.

ಶ್ರೀ ಕೆ. ಶಿವಮೂರ್ತಿ (ಮಾಯಕೊಂಡ):– ಮಾನ್ಯ ಅಧ್ಯಕ್ಷರೆ, ವಿಶ್ವವಿದ್ಯಾನಿಲಯ ಎಂದು ಹೇಳಿದ ತಕ್ಷಣ ಇದು ಹಳೆ ಕಾಲದ ಒಂದು ಪದ ಎನ್ನುವ ರೀತಿಯಲ್ಲಿ ಅರ್ಥ ಬರುತ್ತದೆ. ಇತ್ತೀಚಿನ ದಿನಗಳಲ್ಲಿ ವಿಶ್ವವಿದ್ಯಾನಿಲಯದ ಹಲವಾರು ಸೂಕ್ಷ್ಮತೆ ವಿಚಾರಗಳ ಬಗ್ಗೆ, ಸಂಶೋಧನೆಗಳ ಬಗ್ಗೆ ಜಾಸ್ತಿ ಒತ್ತನ್ನು ಕೊಡುವುದು, ಅದರಲ್ಲೂ ವಿಶೇಷವಾಗಿ gender justice ಗೋಸ್ಕರ ಈ ವಿಶ್ವವಿದ್ಯಾಲಯ ಮಾಡಿದ್ದಾರೆ. ಅದರಲ್ಲೂ ಬಿಜಾಪುರ ಎಂದರೆ backward area ಎಂದು ಹೇಳುವ ಮಾತಿದೆ. ನಮ್ಮ ಸಚಿವರು ಈಗ ಕೊಟ್ಟ ಉತ್ತರದಲ್ಲಿ scheduled caste, scheduled tribe, backward class and minority ಎಂದು ಹೇಳಿದರು. ಮಹಿಳಾ ವಿಶ್ವವಿದ್ಯಾನಿಲಯಕ್ಕೆ ಒಬ್ಬ minority ಹೆಣ್ಣುಮಗಳನ್ನು ಕುಲಪತಿ ಮಾಡಿದಾಗ ಒಂದು ನಿಮಿಷ, ಒಂದು ಗಂಟೆ ನೀವು tolerate ಮಾಡಲಿಲ್ಲ. ಆ ರೀತಿ agitation ಮಾಡಿದರು, ಆಪಾದನೆ ಮಾಡಿದರು ಅವರು ಕುರ್ಚಿಯಲ್ಲಿ ಕೂರುವುದಕ್ಕೆ ಬಿಡಲಿಲ್ಲ, ಕೆಲಸ ಮಾಡುವುದಕ್ಕೆ ಬಿಡಲಿಲ್ಲ. ಅದಕ್ಕೋಸ್ಕರವೇ ಸ್ವಲ್ಪ ಸಹಿಷ್ಣುತೆಯಿರಬೇಕೆಂದು ಹೇಳುವುದು. ತಮ್ಮ ಮೂಲಕ ನಾನು ಒತ್ತಾಯ ಮಾಡುವುದೇನೆಂದರೆ ಈಗಿನ ಕಾಲದಲ್ಲಿ higher education is a sick unit. ಇವರು ದೇಶಕ್ಕೆ, ಬೇರೆ ವಿಶ್ವವಿದ್ಯಾನಿಲಯಗಳಿಗೆ ಹೋಗಿ ಹಲವಾರು ವಿಚಾರಧಾರೆಗಳ exchange ಆಗಬೇಕು ಅದಕ್ಕೆ ಸಂಶೋಧನೆಯಾಗಬೇಕು. ವಿಶ್ವವಿದ್ಯಾನಿಲಯಗಳಲ್ಲಿ ಕೆಳಗಿನ ಸ್ತರದಲ್ಲಿರುವಂತಹ scheduled caste, scheduled tribe ನಲ್ಲಿರುವಂತಹ ಹೆಣ್ಣುಮಕ್ಕಳು, ಗುಡ್ಡಗಾಡಿನವರು, ಆದಿವಾಸಿಗಳು, ಸಣ್ಣ ಸಣ್ಣ

ಸಮಾಜದವರಿದ್ದಾರೆ, ಅದೇ ರೀತಿ ಸಿದ್ಧಿ ಸಮಾಜದವರಿದ್ದಾರೆ ಅದರ ಬಗ್ಗೆ ಸಂಶೋಧನೆ ಆಗಬೇಕಾಗುತ್ತದೆ. They are best on Olympics, they are best sportsmen. ಇದರ ಬಗ್ಗೆ ಗಮನಹರಿಸಬೇಕು. ಅವರಿಗೆ ಯಾವ ರೀತಿ ತರಬೇತಿ ಕೊಡಿಸಬೇಕು ಇದರ ಪಠ್ಯಕ್ರಮ, ವಿಷಯ ಮತ್ತು ಈಗಿನ diversity ಬಗ್ಗೆ ಇದನ್ನು ಅಳವಡಿಸಬೇಕೆಂಬ ಮಾತನ್ನು ಹೇಳುತ್ತಿದ್ದೇನೆ. Affiliaton ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. Government of India ದವರು ಈ affiliation ಹಾಕಿ un-aided school ನಲ್ಲಿ ಕೆಳಸ್ತರದಲ್ಲಿರುವಂತಹ ಜನ ಕಾಲೇಜು ಮಾಡಬೇಕಾದರೆ ಬಹಳ ಕಷ್ಟದ ಕೆಲಸವಾಗಿದೆ. ಅಲ್ಲಿ ನಮಗೆ ಜಮೀನು ಸಿಗುವುದಿಲ್ಲ, ಕಟ್ಟಡ ಕಟ್ಟುವುದಕ್ಕೆ ಆಗುವುದಿಲ್ಲ. ಸಿಬ್ಬಂದಿಗಳನ್ನು ನಿರ್ವಹಣೆ ಮಾಡುವುದಕ್ಕಾಗುವುದಿಲ್ಲ, ಸಂಬಳ ಕೊಡುವುದಕ್ಕಾಗುವುದಿಲ್ಲ. ಹೀಗಾಗಿ ಯಾರೂ ಕೂಡ ಇದರ ಜೊತೆಗೆ ಭಾಗವಹಿಸುವುದಕ್ಕಾಗುವುದಿಲ್ಲ. ಕೆಳಸ್ತರದಲ್ಲಿರುವ ಯಾರು weaker section ಇದ್ದಾರೋ we can't participate in the higher education system. ಪ್ರಾಧಾನ್ಯತೆ ಕೊಡುವ ಬಗ್ಗೆ ಸರ್ಕಾರದವರೇನಾದರೂ ಯೋಚನೆ ಮಾಡುತ್ತಾರಾ? ಕೆಳಸ್ತರದ ಜನರಿಗೆ ಸಂಶೋಧನೆ ಮಾಡುವುದಕ್ಕೋಸ್ಕರ ಅವರಿಗೆ hostel ಗಳಾಗಲಿ ವಿಶೇಷವಾದ ಪ್ರಾಧಾನ್ಯತೆಯಾಗಲಿ ಅವರ ಬಗ್ಗೆ ಸಂಶೋಧನೆ ಮಾಡುವಂತಹ ಕೆಲಸವನ್ನು ನಾವು ಮಾಡಿದರೆ ಇಂತಹ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡಿರುವುದು ಸಾರ್ಥಕವಾಗುತ್ತದೆಯೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಈ ಮಸೂದೆಗೆ ಒತ್ತನ್ನು ಕೊಡುತ್ತೇನೆ.

ಶ್ರೀ ಅರವಿಂದ್ ಬೆಲ್ಲದ್ (ಹುಬ್ಬಳ್ಳಿ-ಧಾರವಡ) (ಪಶ್ಚಿಮ):- ಮಾನ್ಯ ಅಧ್ಯಕ್ಷರೆ, ಮಹಿಳಾ ವಿಶ್ವವಿದ್ಯಾನಿಲಯವನ್ನು ಸಬಲೀಕರಣಗೊಳಿಸುವ ದೃಷ್ಟಿಯಿಂದ ಬರುತ್ತಿರುವ ವಿಧೇಯಕ ಒಳ್ಳೆಯ ವಿಧೆಯಕವಾಗಿದೆ. ಆದರೆ affiliation ದೃಷ್ಟಿಯಿಂದ ನನ್ನದೊಂದು ಸಲಹೆಯಿದೆ. Affiliation optional ಎಂದು ಮಂತ್ರಿಗಳು ಹೇಳಿದರು. ಆದರೆ ಸರ್ಕಾರಿ ಕಾಲೇಜಿಗೆ ಮಾತ್ರ ಇದು compulsory ಇದೆ. ಸರ್ಕಾರಿ ಕಾಲೇಜಿನಲ್ಲಿ ಡಿಗ್ರಿ ಕಲಿಯುವಂತಹ

ಹೆಣ್ಣುಮಕ್ಕಳು ಬಡವರಿರುತ್ತಾರೆ. ಅವರು post-graduation ಮಾಡಬೇಕೆಂದರೆ ಅವರು ಬಿಜಾಪುರಕ್ಕೆ ಹೋಗಬೇಕಾಗುತ್ತದೆ. ಇಲ್ಲಿ ಕಲಿಯಲಾರರು, ನಮ್ಮ ಜಿಲ್ಲೆಯ ಸಮೀಪವಿರುವ ವಿಶ್ವವಿದ್ಯಾನಿಲಯಗಳಿಗೆ ಹೋದರೆ ಅವರು ಹೊರಗಿನ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳೆಂದು ಪರಿಗಣಿಸಿ ಅವರಿಗೆ ಶುಲ್ಕ ಹೆಚ್ಚಾಗುತ್ತದೆ. ಈ abnormality ಯನ್ನು ತೆಗೆಯಬೇಕು. ಶ್ರೀಮಂತ ವಿದ್ಯಾರ್ಥಿಗಳಿಗೆ option ಕೊಟ್ಟು facilitation ಕೊಡುತ್ತೇವೆ. ಬಡ ವಿದ್ಯಾರ್ಥಿಗಳು ಬಿಜಾಪುರಕ್ಕೆ ಹೋಗಿ ವಿದ್ಯಾಭ್ಯಾಸ ಮಾಡಬೇಕಾಗುತ್ತದೆ. ಅವರು ಬಿಜಾಪುರಕ್ಕೆ ಹೋಗಿ ಕಲಿಯುವುದಕ್ಕಾಗುವುದಿಲ್ಲ. ತಮ್ಮ ಊರಿನಲ್ಲಿರುವ ವಿಶ್ವವಿದ್ಯಾನಿಲಯಗಳಿಗೆ ಹೋಗಬೇಕೆಂದರೆ ಅವರು ಹೆಚ್ಚಿನ ಶುಲ್ಕವನ್ನು ಕೊಡಬೇಕಾಗುತ್ತದೆ. ಈ abnormality ಯನ್ನು correction ಮಾಡಬೇಕೆಂಬುದು ನನ್ನ ವಿನಂತಿಯಾಗಿದೆ.

ಡಾ|| ಸಿ.ಎನ್. ಅಶ್ವತ್ಥನಾರಾಯಣ (ಮಲ್ಲೇಶ್ವರಂ):- ಮಾನ್ಯ ಅಧ್ಯಕ್ಷರೆ, ಮಹಿಳಾ ವಿಶ್ವವಿದ್ಯಾನಿಲಯಕ್ಕೆ ಈ ರಾಜ್ಯ ತಿದ್ದುಪಡಿ ತರುತ್ತಿರುವುದರಲ್ಲಿ voluntary clause ತಂದಿರುವುದು ಉತ್ತಮವಾಗಿದೆ. ಯಾವುದೊಂದನ್ನು ಕೂಡ ಇವತ್ತಿನ ದಿವಸ ಹೇರುವುದಕ್ಕೆ ಹೋಗಬಾರದು. ಮಕ್ಕಳಿಗೆ ಸ್ವಾತಂತ್ರ್ಯ ಇರಬೇಕು, ಯಾವುದೊಂದು ವಿಶ್ವವಿದ್ಯಾನಿಲಯದ ಕೆಳಗೆ ಓದುವುದಕ್ಕೆ ಅವಕಾಶ ಸಿಗುವಂತಹದ್ದು ಒಳ್ಳೆಯ ಬೆಳವಣಿಗೆಯಾಗಿದೆ. ಆದರೆ ಸರ್ಕಾರಿ ಕಾಲೇಜಿನಲ್ಲಿ ಅಧಿಕಾರ ಹೇರುವಂತಹ ಪ್ರಯತ್ನ ಮಾಡಿರುವುದು, mandatory ಮಾಡುತ್ತಿರುವುದು ಸರಿಯಲ್ಲ. ಸರ್ಕಾರಿ ಕಾಲೇಜಿಗೆ ಹೋಗುವಂತಹ ಮಕ್ಕಳು ನಿಜವಾದ ಬಡವರು, ಸಂಪೂರ್ಣವಾಗಿ ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ ಮಾತ್ರ compulsory ಮಾಡಿರುವುದು ಸರಿಯಲ್ಲ ಅದನ್ನು ಕೈಬಿಡಬೇಕೆಂದು ಕೇಳಿಕೊಳ್ಳುತ್ತೇನೆ. ಅದರ ಜೊತೆಯಲ್ಲಿ higher education ಮಾಡಬೇಕೆಂದರೆ, post-graduation ಮಾಡಬೇಕೆಂದಾಗ 3% ಕೋಟಾ ಇರುತ್ತದೆ. ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಓದಿರುವಂತಹ ಮಕ್ಕಳು ಮತ್ತೊಂದು ವಿಶ್ವವಿದ್ಯಾನಿಲಯಕ್ಕೆ ಹೋಗಬೇಕೆಂದರೆ 3%, 5% ಕೋಟಾ ಇರುತ್ತದೆ. ಹೀಗಿದ್ದಾಗ ಅವರಿಗೆ admission ಸಿಗುವುದಿಲ್ಲ.

ಮಹಿಳಾ ವಿಶ್ವವಿದ್ಯಾಲಯದಲ್ಲಿ ಎಷ್ಟು ಜನರಿಗೆ ಅವಕಾಶ ಸಿಗುವುದಕ್ಕೆ ಸಾಧ್ಯ? ಈ ರೀತಿ technical disadvantage ಇದೆ. ಮುಖ್ಯವಾಗಿ ಮಹಿಳೆಯರು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ empowerment ಆಗಬೇಕೆಂಬ ದೃಷ್ಟಿಯಿಂದ ಮಹಿಳಾ ವಿಶ್ವವಿದ್ಯಾನಿಲಯ ಮಾಡಿರುವುದು. ಇನ್ನೂ ಹೆಚ್ಚಿನ ಗುಣಮಟ್ಟ ಕಾಯ್ದುಕೊಳ್ಳಬೇಕು, ಸ್ವತಂತ್ರ ಬಂದು ಎಷ್ಟೋ ವರ್ಷಗಳಾದರೂ ಕೂಡ higher eduction ನಲ್ಲಿ ಗುಣಮಟ್ಟ ಪ್ರತಿದಿನ ಕುಸಿಯುತ್ತಿದೆ. ಕುಸಿಯುತ್ತಿರುವ ವಾತಾವರಣದಲ್ಲಿ ಸರ್ಕಾರ ಹೆಚ್ಚು ಹಣವನ್ನು ಖರ್ಚು ಮಾಡುತ್ತಲೇ ಇದೆ. ಆದರೆ ಎಲ್ಲೋ ಒಂದು ಕಡೆ ಕೂಡ ಪ್ರತಿಫಲ ಸಿಗುತ್ತಿಲ್ಲ. ಪ್ರತಿಫಲ ಸಿಗಬೇಕೆಂದರೆ efficiency ಇರುವ ವೈಸ್‌ಚಾನ್ಸಲರ್ ಮುಖ್ಯವಾಗಿದೆ. ಅವರಿಗೆ ಕಾನೂನಿನಲ್ಲಿ competition ಇಲ್ಲದ ರೀತಿ ಆಗಿದೆ. ಯಾರಾದರೂ ಸರಿ ಬಂದು ಸೇರಿಕೊಳ್ಳಬಹುದು ಇವರು ಹೇಗೆ ರಾಜ್ಯಭಾರ ಮಾಡಿದರು, ಇವರು ಹೇಗೆ ಆಡಳಿತ ಮಾಡಿದರು ಕೂಡ ಅವರು ಸಹಿಸಿಕೊಳ್ಳಬೇಕು ಅದೇ ವಿಶ್ವವಿದ್ಯಾನಿಲಯದಲ್ಲಿ ಓದಬೇಕು, ಯಾರೋ ಒಬ್ಬ ವೈಸ್‌ಚಾನ್ಸಲರ್‌ಗೆ ಕರುಣೆ ತೋರಿಸುವುದಕ್ಕೋಸ್ಕರ ಲಕ್ಷಾಂತರ, ಕೋಟ್ಯಾಂತರ ಮಕ್ಕಳು ಚಿಕ್ಕ ವಯಸ್ಸಿನಿಂದ ಕಷ್ಟುಪಟ್ಟು ಓದಿ ಉಜ್ವಲವಾದ ಭವಿಷ್ಯ ಪಡೆಯಬೇಕೆಂಬ ಕನಸುಗಳನ್ನು ಕಟ್ಟಿಕೊಂಡು ಬಂದಿರುತ್ತಾರೆ ಆದರೆ ಪ್ರತಿಫಲ ಸಿಗದಿದ್ದರೆ ಏನು ಪ್ರಯೋಜನ? ಸರ್ಕಾರ ಮಾಡಿದ ಪ್ರಯತ್ನಕ್ಕೆ ಯಾವುದೇ ರೀತಿಯ ಪ್ರಯೋಜನವಾಗುವುದಿಲ್ಲ. ಆ ಕಾರಣದಿಂದ ವೈಸ್‌ಚಾನ್ಸಲರ್ ಅಥವಾ ಮಹಿಳಾ ವಿಶ್ವವಿದ್ಯಾನಿಲಯ ಬೇರೆ ಬೇರೆ programmes ಆದ diploma, skilled base programmes, employment, measurable performance ಸಿಗಬೇಕು, ವಿಶ್ವವಿದ್ಯಾನಿಲಯದಲ್ಲಿ corporate ರವರನ್ನು ಬೇರೆ ಬೇರೆ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಮಹಿಳೆಯರು ಆ ಸಮಿತಿಯಲ್ಲಿ ಇರಬೇಕು. ವಿಶ್ವವಿದ್ಯಾನಿಲಯದ ಹಿನ್ನೆಲೆಯಿರುವುದಿಲ್ಲ ರಾಜಕೀಯದ ಮೂಲಕ political party workers ತಂದು ಸಿಂಡಿಕೇಟ್ ಸದಸ್ಯರನ್ನಾಗಿ ಮಾಡುತ್ತೇವೆ. ಮತ್ತೆ ಸಿಗುವ ಪ್ರತಿಫಲ ಏನೆಂದರೆ, ಅವರಿಗೆ ಸ್ಥಾನ ಕೊಡುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ. ಇವತ್ತು ಕಾನೂನಿನಲ್ಲಿ expert ಗಳನ್ನು ನೇಮಕ ಮಾಡಬೇಕೆಂದು ಅವಕಾಶವಿದ್ದರೂ ಕೂಡ

ಯಾವುದೇ expert ಗಳನ್ನು ನೇಮಕ ಮಾಡುವುದಿಲ್ಲ. ರಾಜಕೀಯ ಒತ್ತಡದಿಂದ ನಾವು ಪದೇ ಪದೇ ರಾಜಕೀಯ ಕಾರ್ಯಕರ್ತರನ್ನು ತಂದು ವಿಶ್ವವಿದ್ಯಾನಿಲಯಕ್ಕೆ ಸಿಂಡಿಕೇಟ್ ಸದಸ್ಯರನ್ನಾಗಿ ಮಾಡುತ್ತೇವೆ. ಯಾವುದೇ ರೀತಿಯ ಭವಿಷ್ಯ, character ಮತ್ತು knowledge centre ಆಗಿ ಬೆಳೆಸುವಂತಹ ಪ್ರಯತ್ನದಲ್ಲಿ ಯಾವುದು ನಡೆಯದಿರುವ ಕಾರಣ centre of excellence ಆಗಿ ಯಾವುದೇ ವಿಶ್ವವಿದ್ಯಾನಿಲಯ ಕೂಡ ಬೆಳೆದಿಲ್ಲ. ಶಿಕ್ಷಣ ಸಚಿವರು ಈ ದಾರಿಯಲ್ಲಿ ಕೆಲಸ ಮಾಡುವಂತಹ ಆಸಕ್ತಿಯನ್ನು ಹೊಂದಿದ್ದಾರೆ ದಯವಿಟ್ಟು ಸರ್ಕಾರಿ ಕಾಲೇಜಿಗೆ ಮಾಡಿರುವ mandatory ಯನ್ನು ಕೈಬಿಟ್ಟು ವಿಶ್ವವಿದ್ಯಾನಿಲಯವನ್ನು ಇನ್ನಷ್ಟು scale up ಮಾಡಿ quality centre ಆಗಿ ಮಾಡಿ. Women empowerment ಗೆ, employment ಗೆ ಏನೇನು ಬೇಕೋ skill ಮತ್ತು ಬೇರೆ ಬೇರೆ diploma programmes ಬಹಳಷ್ಟು ಯೋಚನೆ ಮಾಡುತ್ತಿದ್ದೀರಿ ಆ ದಾರಿಯಲ್ಲಿ corporate companies ನಲ್ಲಿ ಸಾಧನೆ ಮಾಡಿರುವಂತಹ ಮಹಿಳೆಯರು ವಿಶ್ವವಿದ್ಯಾನಿಲಯದಲ್ಲಿ ಸಿಂಡಿಕೇಟ್ ಸದಸ್ಯರಾಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಬಿ.ಆರ್. ಪಾಟೀಲ್ (ಆಳಂದ):- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಇದನ್ನು ತಂದಿದ್ದು, ನಾನು ಸ್ವಾಗತ ಮಾಡುತ್ತೇನೆ. ಮಹಿಳಾ ವಿಶ್ವವಿದ್ಯಾನಿಲಯವನ್ನು ಪ್ರತ್ಯೇಕ ಮಾಡಿದಂತಹ ಉದ್ದೇಶವೇನೆಂದರೆ, ಬಹುಶಃ ಮಹಿಳೆ ಈ ವ್ಯವಸ್ಥೆಯಲ್ಲಿ ಇವತ್ತಿಗೂ ಕೂಡ ಗುಲಾಮಳು ಎಂಬ ಆಪಾದನೆಯಿದೆ. ಇವರನ್ನು ಮೇಲಕ್ಕೆ ತಂದು ಸ್ಥಾನಮಾನವನ್ನು ಕೊಡಬೇಕೆಂಬ ಉದ್ದೇಶದಿಂದ ಇದನ್ನು ತಂದಿರಬೇಕೆಂದು ನಾನು ಭಾವಿಸುತ್ತೇನೆ. ಎಲ್ಲಾ ಜಿಲ್ಲೆಗಳೂ ತಮ್ಮದೇ ಆದ ಅಸ್ತಿತ್ವವನ್ನು ಹೊಂದಬೇಕೆಂಬ ಉದ್ದೇಶದಿಂದ ಬೇರೆ ಬೇರೆ ಜಿಲ್ಲೆಗಳಿಗೆ ಸ್ಥಾನಮಾನಗಳನ್ನು ಕೊಟ್ಟು ವಿಶ್ವವಿದ್ಯಾನಿಲಯಗಳನ್ನು ಮಾಡಿದ್ದೀರಿ. ಆದರೆ ಇದರಲ್ಲಿ ನನಗೆ ಒಂದು ಅನುಮಾನ ಬರುತ್ತಿದೆ. ತಾವೇನೂ ಆರು ತಿಂಗಳುಗಳ ಕಾಲ ಅವಕಾಶ ಕೊಟ್ಟು ನಂತರ ಅವರು ಬೇಕಿದ್ದರೆ ಸೇರಬಹುದು ಅಥವಾ

ಬಿಡಬಹುದು ಎನ್ನುವ ರೀತಿ ಮಾಡಿರುವುರಿಂದ ಮುಂದಿನ ದಿನಗಳಲ್ಲಿ ಮತ್ತೇ, ಉತ್ತರ ಕರ್ನಾಟಕವನ್ನು ಮೂಲೆ ಗುಂಪು ಮಾಡಿ, ಮತ್ತೇ ಪ್ರತ್ಯೇಕವಾಗಿ ತಮ್ಮದೇ ಆದ ಯೂನಿವರ್ಸಿಟಿ ಮಾಡಬಹುದೆನ್ನುವ ಅನುಮಾನ ಈಗಾಗಲೇ ಕರ್ನಾಟಕದಲ್ಲಿ ಅಪಸ್ವರ ಬರುತ್ತಿದೆ. ನಮಗೆ ಅನ್ಯಾಯವಾಗುತ್ತಿದೆ, ಕಡೆಗಣಿಸುತ್ತಿದ್ದಾರೆ ಎನ್ನುವ ಮಾತುಗಳು ಬರುತ್ತಿದ್ದು, ದಯಮಾಡಿ ಇದಕ್ಕೆ ಅವಕಾಶ ಮಾಡಿಕೊಡಬೇಡಿ. ನಮ್ಮ ಸಾಂಸ್ಕೃತಿಕ ಆಧಾರ ಪ್ರಧಾನವಾಗಬೇಕು. ಮಂಡ್ಯದಲ್ಲಿ ಮತ್ತೊಂದು ಕೇಂದ್ರವನ್ನು ಮಾಡಿದ್ದೀರಿ. ಇದಕ್ಕೆ ನಾವು ಸ್ವಾಗತ ಮಾಡುತ್ತೇವೆ. ಏಕೆಂದರೆ ಮಂಡ್ಯ ಜಿಲ್ಲೆ ಈ ಭಾಗದ ಸಂಸ್ಕೃತಿ. ಆದರೆ ಅಲ್ಲಿನ ಪರಿಸ್ಥಿತಿಯೇ ಬೇರೆ. ಸಂಸ್ಕೃತಿಕವಾಗಿ ಆಧಾರ ಪ್ರಧಾನವಾಗಬೇಕಾದರೆ ದಯಮಾಡಿ ನೀವಿಟ್ಟಿರುವ option ಅನ್ನು ತೆಗೆದುಹಾಕಿ. ಇಲ್ಲದಿದ್ದರೆ ಇದರ ಕೆಳಗೆ shelter ತೆಗೆದುಕೊಂಡು ಬಹಳ ಜನ ಕೋರ್ಟಿಗೆ ಹೋಗುತ್ತಾರೆ. ಅಂತಹ ಸಮಯದಲ್ಲಿ ನೀವು ಕಷ್ಟಕ್ಕೆ ಸಿಲುಕಿ ಮಾಡಬೇಕೆಂದರೂ ಮಾಡುವುದಕ್ಕಾಗುವುದಿಲ್ಲ. ಇದು ಕಾನೂನಿನ ಬಹಳ ದೊಡ್ಡ ಅಸ್ತ್ರ. ಒಂದು ಸಾರಿ ಕಾನೂನಿನ ಅಸ್ತ್ರವನ್ನು ಅವರ ಕೈಗೆ ಕೊಟ್ಟರೆ ಅದನ್ನು ಮತ್ತೇ ನೀವು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಮತ್ತೇ ಅವರು ಬೇರೆ ಕಟ್ಟೆ ಹತ್ತುತ್ತಾರೆ. ದಯಮಾಡಿ ಅದಕ್ಕೆಲ್ಲಾ ಅವಕಾಶ ಕೊಡಬೇಡಿ. ಬಿಜಾಪುರದಲ್ಲಿ ಏನು ವಿಶ್ವವಿದ್ಯಾಲಯ ಮಾಡಿದ್ದೀರಿ, ಅದನ್ನೇ ಬಲಿಷ್ಟವಾಗಿ ಮಾಡಿ, ಅದಕ್ಕೆ option ಕೊಡದೇ ಎಲ್ಲವೂ ಅಲ್ಲಿಯೇ affiliate ಮಾಡುವ ಹಾಗೇ ಮಾಡಿ.

ಶ್ರೀ ಆರ್.ವಿ. ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಸದಸ್ಯರುಗಳಾದ ಶ್ರೀ ವಿಶ್ವೇಶ್ವರಯ್ಯ ಹೆಗಡೆ ಕಾಗೇರಿ, ಸಿ.ಟಿ. ರವಿ, ಗೋವಿಂದ ಎಂ. ಕಾರ್‌ಜೋಳ್, ಶಿವಮೂರ್ತಿ, ಅಶ್ವತ್ಥನಾರಾಯಣ್, ಅರವಿಂದ್ ಚಂದ್ರಕಾಂತ ಬೆಲ್ಲದ್, ಬಿ.ಆರ್. ಪಾಟೀಲ್ ಅವರುಗಳೆಲ್ಲರೂ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಮುಖ್ಯವಾಗಿ ಕಾರ್‌ಜೋಳ್ ಅವರೆ, ತಾವು ಬಾಗಲಕೋಟೆ ಜಿಲ್ಲೆಯಲ್ಲಿರುತ್ತೀರಿ. ಇತ್ತೀಚೆಗೆ ನಾನು ಮತ್ತು

ಮುಖ್ಯಮಂತ್ರಿಗಳಿಬ್ಬರೂ ಹೋಗಿ ಮಹಿಳಾ ವಿಶ್ವವಿದ್ಯಾನಿಲಯಕ್ಕೆ ಹೋಗಿ ಹಲವಾರು ಕಟ್ಟಡಗಳ ಉದ್ಘಾಟನೆ ಮಾಡಿ ಬಂದಿದ್ದೇವೆ. ಅಲ್ಲಿ ಸಾಕಷ್ಟು ಒಳ್ಳೆಯ ಮೂಲಭೂತ ಸೌಕರ್ಯಗಳು ನಿರ್ಮಾಣವಾಗಿವೆ ಮತ್ತು ಇನ್ನೂ ಆಗಬೇಕಾದದ್ದು ಇವೆ.

ಶ್ರೀ ಗೋವಿಂದ ಎಂ. ಕಾರಜೋಳ:- ತಾವು ಹೇಳಿದ ಹಾಗೆ ಸಾಕಷ್ಟು ಮೂಲಭೂತ ಸೌಕರ್ಯಗಳಾಗಿರುವುದಿಲ್ಲ. ಇವತ್ತಿಗೂ ಸಿಟಿಯಲ್ಲಿರತಕ್ಕಂತಹ PWD ಯ ಹಳೆಯ Inspection Bungalow ರಲ್ಲಿ ಮತ್ತು ಅಂಬೇಡ್ಕರ್ ಭವನದಲ್ಲಿ ತರಗತಿಗಳನ್ನು ನಡೆಸುತ್ತಿದ್ದೇವೆ. ನಾನು 50 ಕೋಟಿ ರೂ. ಗಳಿಗೆ ಮನವಿ ಮಾಡಿದ್ದೇನೆ. ದಯಮಾಡಿ ತಾವು ಮಾತನಾಡಿ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ನಾನೂ ಎಲ್ಲವೂ ಆಗಿದೆ ಎಂದು ಹೇಳಲಿಲ್ಲ. ಸಾಕಷ್ಟು ಅಭಿವೃದ್ಧಿಯಾಗದೆ ಮತ್ತು ಇನ್ನೂ ಅಭಿವೃದ್ಧಿ ಆಗಬೇಕಾಗಿದೆ ಎಂದು ಹೇಳಿದೆ. ಮಹಿಳಾ ವಿಶ್ವವಿದ್ಯಾನಿಲಯಕ್ಕೆ ವಿಶೇಷ ಅನುದಾನದಡಿಯಲ್ಲಿ 5 ಕೋಟಿ ರೂ. ಗಳನ್ನು ಕೊಟ್ಟಿದ್ದೇವೆ. RUSA ದಲ್ಲಿ university ಗೆ 20 ಕೋಟಿ ರೂ. ಗಳನ್ನು ಮಂಜೂರು ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕೊಟ್ಟಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಮಹಿಳಾ ವಿಶ್ವವಿದ್ಯಾನಿಲಯವಾಧಂತಹ ಸಂದರ್ಭದಲ್ಲಿ, ಮಂಡ್ಯ ಕೇಂದ್ರವಾಗಬೇಕು, ಮಹಿಳಾ ವಿಶ್ವಿವಿದ್ಯಾನಿಲಯ ಅಭಿವೃದ್ಧಿಯಾಗಬೇಕೆಂಬ ದೃಷ್ಟಿಯಿಂದ ಮುಂಗಡ ಪತ್ರದಲ್ಲಿ 35 ಕೋಟಿ ರೂ. ಗಳನ್ನು ಬಿಡುಗಡೆ ಮಾಡುವುದಕ್ಕೆ ಮಂಜೂರು ಮಾಡಿದ್ದಾರೆ ಮತ್ತು ಬಿಡುಗಡೆ ಮಾಡುವುದಕ್ಕೆ ಪ್ರಸ್ತಾವನೆ ಕೊಟ್ಟಿದ್ದೇವೆ. ಹಾಗಾಗಿ 100 ಕ್ಕೆ ನೂರರಷ್ಟು ಎಲ್ಲಾ ಮೂಲಭೂತ ಸೌಕರ್ಯ ನಿರ್ಮಾಣವಾಗಿದೆಯೆಂದು ಹೇಳುವುದಕ್ಕೆ ತಯಾರಿಲ್ಲ. ಆದರೆ ಆ ದಿಕ್ಕಿನಲ್ಲಿ ಇಂದು ಸರ್ಕಾರ ವಿಶ್ವವಿದ್ಯಾನಿಲಯಗಳ ಕೆಲಸ ಮಾಡುತ್ತಿದೆ. ಎರಡನೇಯದಾಗಿ ಮಾನ್ಯ ಸದಸ್ಯರು ಹಾಗೂ ನಮ್ಮ ಸ್ನೇಹಿತರಾದ ಸಿ.ಟಿ. ರವಿಯವರು ಪ್ರತಿಯೊಂದು ಜಿಲ್ಲೆಗೂ ಯೂನಿವರ್ಸಿಟಿಯಾಗಬೇಕೆಂದು ಹೇಳಿದರು. ಸೂಚನೆ ಒಳ್ಳೆಯದಿರಬಹದು, ಆದರೆ practically ಅದನ್ನು ಇಂಪ್ಲಿಮೆಂಟ್

ಮಾಡುವುದಕ್ಕೆ ಸಾಧ್ಯವೇ? ಒಂದು ಯೂನಿವರ್ಸಿಟಿ ಸರ್ಕಾರದ ಮರ್ಸಿಯಲ್ಲಿ ಅಥವಾ ಸಬ್ಸಿಡಿಯಲ್ಲಿ ನಡೆಯಬಾರದು. ಆ ಯೂನಿವರ್ಸಿಟಿಯೂ ಸಹ ultimately function ಆಗಬೇಕಾದದರೆ ಅದಕ್ಕೆ ತನ್ನದೇ ಆದ ಆದಾಯ ಬೇಕು? ಮೂಲಭೂತ ಸೌಕರ್ಯ ಮಾಡಬಹುದು. ಹಾಗಾಗಿ ಅದು practically difficult ಮೂರನೇಯದಾಗಿ ಮುಖ್ಯವಾಗಿ ತಾವು ಹೇಳಿದ ಹಾಗೆ, ಕೇವಲ ಯೂನಿವರ್ಸಿಟಿಗಳಲ್ಲಿ ಡಿಗ್ರಿ ಕೊಡುವವ ಕೆಲಸ ಮಾತ್ರವಾಗಬಾರದು. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಹಾಗಾಗಿ ಹೆಚ್ಚಿನ ಉತ್ತೇಜನವನ್ನು ಸಂಶೋಧನೆ ಮಾಡುವುದಕ್ಕೆ ಕೊಡುತ್ತಿದ್ದೇನೆ. ಮಂಡ್ಯ ಸೆಂಟರ್‌ನಲ್ಲಿ ಐದು ಪಿ.ಜಿ. ಸೆಂಟರ್‌ಗಳು ಪ್ರಾರಂಭವಾಗಿದೆ. ತಾವು ಹೇಳಿದ ಹಾಗೆ ಪಿ.ಜಿ. ಸ್ಟೂಡೆಂಟ್ಸ್‌ಗೆ jurisdiction ವ್ಯಾಪ್ತಿ ಹೆಚ್ಚಾದರೆ ಏನಾಗಬಹುದು? ಪಿ.ಜಿ. ಸೆಂಟರ್‌ಗಳನ್ನು ಹೆಚ್ಚಿಗೆ ಮಾಡುವುದಕ್ಕೆ ಮುಂದಿನ ದಿನಗಳಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇವೆ. ಹೊಸ ವಿಶ್ವವಿದ್ಯಾನಿಲಯಗಳು 2003 ರಲ್ಲಿ ಪ್ರಾರಂಭವಾದ ಸಮಯದಲ್ಲಿ jurisdiction ಗುಲ್ಬರ್ಗಾ ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯ ಇತ್ತು. ಆಗ ಸರ್ಕಾರದಿಂದ Women University degree courses ನಿಮ್ಮದು equallent ಎಂದು ಟ್ರೀಟ್ ಮಾಡಬೇಕೆಂದು ಸೂಚನೆ ಕೊಟ್ಟಿದ್ದೆವು. ಆದರೆ ಪಿ.ಜಿ. ಗೆ ತೊಂದರೆಯಾಗಬಾರದು, ಹಾಗಾಗಿ ಇವುಗಳು ಒಂದು shape ಆಗುವ ತನಕ teething troubles ಇರುತ್ತವೆ. ಈಗಾಗಲೇ Vice Chancellor ಗೆ ಹೇಳಿರುವುದೇನೆಂದರೆ entire jurisdiction ವ್ಯಾಪ್ತಿ ಹೆಚ್ಚಾದಾಗ ಪಿ.ಜಿ. ಕೋರ್ಸ್‌ಸ್ ಹೆಚ್ಚಾಗಬೇಕು. ಈ ಒಂದು ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕೆಂದು ಹೇಳಿದ್ದೇವೆ. ಮಾನ್ಯ ಸದಸ್ಯರಾದ ಶ್ರೀ ರಮೇಶ್‌ಕುಮಾರ್ ಅವರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ಬಗ್ಗೆ ಕೆಲವು ಮಾನ್ಯ ಸದಸ್ಯರುಗಳು ಮಾತನಾಡಿರುತ್ತಾರೆ. ವಿಶ್ವೇಶ್ವರ ಹೆಗಡೆ ಕಾಗೇರಿಯವರು ಮಾತನಾಡುತ್ತಾ ಕೆಲವೊಂದು ವಿಶ್ವವಿದ್ಯಾನಿಲಯದಲ್ಲಿ ನಡೆಯುತ್ತಿರುವುದನ್ನು ಹೇಳಿದಾಗ ನಮಗೂ ನೋವಾಗುತ್ತದೆ. ಇಂತಹ ಕಡೆಗಳಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆ. ಆದರೆ ಕ್ರಮ ತೆಗೆದುಕೊಳ್ಳುವುದರಿಂದ ಸಮಾಧಾನ ಏನು? ಆಡಳಿತದಲ್ಲಿ ಪಾರದರ್ಶಕತೆ ಬರಬೇಕು. ಅದರಲ್ಲೂ ವಿಶೇಷವಾಗಿ

ನೇಮಕಾತಿಯ ವಿಷಯದಲ್ಲಿ ಪಾರದರ್ಶಕತೆ ಇರಬೇಕೆನ್ನುವುದನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಹಾಗಾಗಿ ಅದರ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ ಮತ್ತು ಈ ಬಗ್ಗೆ Higher Council ನಲ್ಲಿಯೂ ಸಹ ಚರ್ಚೆ ಮಾಡುತ್ತಿದ್ದೇವೆ. ಅದು autonomous body ಯಾಗಿರುವುದರಿಂದ ಹೆಚ್ಚು ಹಸ್ತಕ್ಷೇಪ ಮಾಡುವುದಕ್ಕಾಗುವುದಿಲ್ಲ. ಹಾಗಾಗಿ ಆಡಳಿತ ಮಂಡಳಿ ಮತ್ತು ನೇಮಕಾತಿ ವಿಷಯದಲ್ಲಿ ಪಾರದರ್ಶಕತೆ ಯಾವ ರೀತಿ ತರುವುದಕ್ಕೆ ಸಾಧ್ಯವಾಗುತ್ತದೆ ಎಂಬ ಬಗ್ಗೆ ಚಿಂತನೆ ನಡೆಯುತ್ತಿದೆ. ಈ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಮುಖ್ಯವಾಗಿ ಶಿಕ್ಷಣ ಕ್ಷೇತ್ರದಲ್ಲಿ technology ಯ ಉಪಯೋಗವನ್ನು ಬಹಳಷ್ಟು ಮಾಡುತ್ತಿದ್ದೇವೆ. ಹಾಗಾಗಿ most of degree colleges, polytechnic ನಲ್ಲಿ EDUSAT education ಪ್ರಾರಂಭ ಮಾಡಿದ್ದೇವೆ. ಬಹಳಷ್ಟು ಕಡೆ ಶಿಕ್ಷಕರ ಕೊರತೆಯಿದೆ. ಗುಲ್ಬರ್ಗಾ ಸಚಿವ ಸಂಪುಟ ಸಭೆಯಲ್ಲಿ ಆರ್ಟಿಕಲ್ 371 (ಜೆ) ಪ್ರದೇಶಗಳಿಗೆ ಟೆಲಿ ಎಜುಕೇಷನ್ ಪ್ರಾರಂಭ ಮಾಡುವುದಕ್ಕೆ ಆದೇಶ ಮಾಡಿದ್ದೇವೆ. ಕ್ರಮೇಣವಾಗಿ ಇದನ್ನು ಇಡೀ ರಾಜ್ಯಕ್ಕೆ ವಿಸ್ತರಣೆ ಮಾಡಬೇಕೆಂದಿದ್ದೇವೆ. ಮಕ್ಕಳಿಗೆ ಶಿಕ್ಷಕರಿಲ್ಲದಿದ್ದರೂ ಸಹ ಪಾಠವನ್ನು ಕಲಿಯಬೇಕೆಂಬ ಉದ್ದೇಶದಿಂದ Smart Class Institute ಮಾಡುತ್ತಿದ್ದೇವೆ. Virtual Class Institute ಪ್ರಾರಂಭ ಮಾಡಿದ್ದೇವೆ. ಹಾಗಾಗಿ ತಾವು ಹೇಳಿದ ಹಾಗೆ ultimately ಉತ್ತಮ ಗುಣಮಟ್ಟದ ಶಿಕ್ಷಣ ದೊರೆಯಬೇಕು. ಶಿಕ್ಷಣ affordable ಇರಬಹುದು, ಬಡ ವಿದ್ಯಾರ್ಥಿಗಳಿಗೆ, ರೈತರ ಮತ್ತು ಹಿಂದುಳಿದವರ ಮಕ್ಕಳಿಗೆ ವಿದ್ಯಾಭ್ಯಾಸ ಮಾಡುವ ಅವಕಾಶ ದೊರೆಯಬೇಕೆಂದು ಕಳೆದ 2–3 ವರ್ಷಗಳಿಂದ ನಾವು fees ಹೆಚ್ಚು ಮಾಡಿರುವುದಿಲ್ಲ. Around 51 ಡಿಗ್ರಿ ಕಾಲೇಜುಗಳನ್ನು ಪ್ರಾರಂಭ ಮಾಡಿದ್ದೇವೆ ಮತ್ತು 23 ಮಹಿಳಾ ಕಾಲೇಜುಗಳಿವೆ. ಹಾಗಾಗಿ ಇಂದು ತಾವೆಲ್ಲರೂ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದೀರಿ. ಆ ಸಲಹೆಗಳನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ. ಬಹಳ ಮುಖ್ಯವಾದ ಒಂದು ವಿಚಾರವೇನೆಂದರೆ ಮಾನ್ಯ ವಿರೋಧ ಪಕ್ಷದ ನಾಯಕರು aided and un-aided ಕಾಲೇಜುಗಳಿಗೆ option ಕೊಡಬಾರದೆಂದು ಹೇಳಿದರು. ನನ್ನ ದೃಷ್ಟಿಯಿಂದ ಇದನ್ನು ವಿಚಾರ ಮಾಡುವಂತಹ ಸಂದರ್ಭದಲ್ಲಿ ನಾವು ಸ್ವಲ್ಪ ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ

ಕೆಲಸ ಮಾಡಬೇಕಾಗಿದೆ. ಕೆಲವು ಕಾಲೇಜುಗಳು ಮೈಸೂರು ಯೂನಿವರ್ಸಿಟಿಗೆ, ಕೆಲವು ಕಾಲೇಜುಗಳು ಬೆಂಗಳೂರು ಮತ್ತು ಮಂಗಳೂರು ಯೂನಿವರ್ಸಿಟಿಗಳಿಗೆ affiliate ಆಗಿವೆ. Join ಆಗಬೇಕೆಂದು one stroke ನಲ್ಲಿ ಹೇಳಿದರೆ ಸ್ವಲ್ಪ resistance ಬರಬಹುದು. ತಾವು ಹೇಳಿದ ಹಾಗೆ Opportunity ಕೊಟ್ಟಿಲ್ಲವೆಂದರೆ ಕೋರ್ಟಿಗೆ ಹೋಗಬಹುದು. ನಾವು opportunity ನಾವು ಕೊಟ್ಟಿದ್ದೇವ. ಒಂದು ವೇಳೆ ಅದರಿಂದ ಲಾಭವಾಗುತ್ತಿಲ್ಲವೆಂದರೆ ಪುನಃ ಅದಕ್ಕೆ ತಿದ್ದುಪಡಿ ತರಬಹುದು. ಆದರೆ democracy ಯಲ್ಲಿ ಒಂದು opportunity ಕೊಡುವುದು ಸರಿಯೆನ್ನುವ ವಿಚಾರದಿಂದ ಮಾಡಿದ್ದೇವೆ. ವಿಶ್ವೇಶ್ವರ ಹೆಗಡೆಯವರು ಹೇಳಿದ ಹಾಗೆ ಎರಡೇ ವಿಶ್ವವಿದ್ಯಾನಿಲಯಗಳಾಗುತ್ತವೆ. Cluster University ಎಂದರೆ 10–20 ಕಾಲೇಜ್‌ಗಳಲ್ಲ. Only these two colleges. ಬೆಂಗಳೂರನಲ್ಲೊಂದು ಮತ್ತು ಮೈಸೂರಿನಲ್ಲಿ university ಆಗುತ್ತವೆ. Cluster University ಅಂದರೆ 2+3, 4 ಕಾಲೇಜುಗಳು ಕೂಡಿ, NAAC accredited ಕಾಲೇಜ್‌ಗಳಾಗುತ್ತವೆ. ಆ ಒಂದು ದಿಕ್ಕಿನಲ್ಲಿ ಕ್ರಮ ತೆಗೆದುಕೊಂಡಿದ್ದೇವೆ. ಹಾಗಾಗಿ ಈ ಮಸೂದೆಗೆ ತಾವು ಮನ್ನಣೆ ಕೊಡಬೇಕೆಂದು ಕೇಳಿ ಕೊಳ್ಳುತ್ತೇವೆ.

ಶ್ರೀ ಗೋವಿಂದ ಎಂ. ಕಾರ್‌ಜೋಳ್:– ಸೆಕ್ಷನ್ (7) ರಲ್ಲಿ ಪ್ರಾವಿಷನ್ ಮಾಡಿರುವುದಕ್ಕೆ ಆರು ತಿಂಗಳ ಕಾಲಾವಕಾಶ ಮಾಡಿ ಕೊಟ್ಟಿದ್ದೀರಿ. ಇದರಲ್ಲಿ ಅವರ ಬೇಡಿಕೆ ಸರಿಯಿಲ್ಲದಿದ್ದರೆ ತಿರಸ್ಕಾರ ಮಾಡುವಂತಹ ಅಧಿಕಾರವನ್ನು ಸರ್ಕಾರವೇ ಇಟ್ಟುಕೊಳ್ಳಬೇಕು. ಒಂದು ವೇಳೆ ಅವರು ಬೇರೆ ಕಡೆ ಉಳಿಯುತ್ತೇವೆಂದು ಹೇಳಿ, ಅವರ ಬೇಡಿಕೆ ಯೋಗ್ಯವಿಲ್ಲವೆಂದರೆ ತಿರಸ್ಕಾರ ಮಾಡಿ ಅಲ್ಲಿಯೇ ಹೋಗಬೇಕೆಂದು insist ಮಾಡುವ ಅಧಿಕಾರವನ್ನು ಇಟ್ಟುಕೊಳ್ಳಿ.

ಶ್ರೀ ಆರ್.ವಿ. ದೇಶಪಾಂಡೆ:– Option ಮಾತ್ರ ಕೊಟ್ಟಿದ್ದೇವೆ. Option ನಲ್ಲಿರುವುದೇನೆಂದರೆ, ಉದಾಹರಣೆಗೆ ಕಾಲೇಜ್ ಒಂದು ಮಂಡ್ಯದಲ್ಲಿದೆ, ಆ ಕಾಲೇಜು affiliate ಆಗಿರಬಹುದು, ಇಲ್ಲವೆಂದು ಹೇಳಬಹುದು. ಅದಕ್ಕೆ ಕಾರಣವೇನೆಂದರೆ ultimately ಕೆಲವು ಕಾಲೇಜುಗಳು ಪ್ರಾರಂಭವಾಗಿ 10–15

ವರ್ಷಗಳಾಗಿವೆ. ಅವುಗಳು affiliate ಆಗಿವೆ. Suddnely ಒಂದು ವೇಳೆ affiliation withdraw ಮಾಡಿದರೆ ಗೊಂದಲ ಆಗಬಾರದು ಎನ್ನುವ . . . . (ಗೊಂದಲ)

ಶ್ರಿ ಬಿ.ಆರ್. ಪಾಟೀಲ್:- ಸಾರ್, ತಾವು ಈ ವಿಷಯಕ್ಕೆ ಸಂಬಂಧಿಸಿದಂತೆ ಹೇಳುವ ಉದ್ದೇಶವೊಂದಿದೆ. ಬೇರೆ ಬೇರೆ ಯೂನಿವರ್ಸಿಟಿಗಳಲ್ಲಿ ಮಾಡಿದಾಗ ಈ option ಅನ್ನು ತಾವು ಯಾರಿಗೂ ಕೊಟ್ಟಿರುವುದಿಲ್ಲ. ಈಗ ಪ್ರತ್ಯೇಕವಾಗಿ option ಏಕೆ ಕೊಡುತ್ತಿದ್ದೀರಿ? ಆಗ compulsory ಆಗಿ ಗುಲ್ಬರ್ಗಾ ಯೂನಿವರ್ಸಿಟಿಗೆ ಹೋಗುವವರು ಹೋದರು, ಅವರಿಗೆ option ಆಗ ಇರಲಿಲ್ಲ. ಆದರೆ ಈ ಸಾರಿ option ಏಕೆ ಎಂದು ಅನುಮಾನ ಬರುತ್ತಿದೆ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ಕೆಲವೊಂದು ಅನುಭವದ ಮೇಲೆ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅವಕಾಶ ಕೊಟ್ಟಿದ್ದೇವೆ. ಒಂದು ವೇಳೆ ಅದರ ದುರ್ಲಭವನ್ನು ಯಾರಾದರೂ ತೆಗೆದುಕೊಂಡರೆ ಖಂಡಿತವಾಗಿಯೂ ತಿದ್ದುಪಡಿ ತಂದು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಸಿ.ಟಿ. ರವಿ:- ಮಾನ್ಯ ಅಧ್ಯಕ್ಷರೆ, ಬೇರೆ ವಿಶ್ವವಿದ್ಯಾನಿಲಯಗಳಿಗೆ jurisdiction ವ್ಯಾಪ್ತಿಯಿದೆ. ಕೆಲವೊಂದು ವಿಶ್ವವಿದ್ಯಾನಿಲಯಗಳು ಟೆಕ್ನಿಕಲ್ ಕಾರಣಗಳಿಂದಲೇ ಪ್ರಾರಂಭವಾಗಿವೆ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ, ಪಶುಸಂಗೋಪನಾ ವಿಶ್ವವಿದ್ಯಾನಿಲಯ, ಇದು ಪಶುಸಂಗೋಪನೆಗೆ ಮಾತ್ರ ಇರುವಂತಹ ವಿಶ್ವವಿದ್ಯಾನಿಲಯ. Health University ಯು ಮೆಡಿಕಲ್‌ಗೆ ಮಾತ್ರ ಸಂಬಂಧಪಟ್ಟದ್ದಾಗಿರುವುದರಿಂದ ರಾಜ್ಯವ್ಯಾಪ್ತಿ ಇದೆ. ಇದರಲ್ಲಿ ಸಿಲಬಸ್ ಏನು? ಕೇವಲ ಮಹಿಳೆಯರಿಗಾಗಿ ಅಧ್ಯಯನ ಎಂದರೆ ಅದರಲ್ಲಿ ರಾಜ್ಯವಾಪ್ತಿ ಸೇರಿಸುತ್ತೀರಾ? ಸೇರಿಸಿ. ಜನರಲ್ ಸಿಲಬಸ್ ರಾಜ್ಯವ್ಯಾಪ್ತಿ ಎಂದರೆ ಇದರಿಂದ ತೊಂದರೆಯಾಗುತ್ತದೆ. ನಮಗೆ P.G ಮಾಡುವಷ್ಟು ವ್ಯವಸ್ಥೆ ಆ university ಗಳಲ್ಲಿ ಇದೆಯೇ? ನಾಳೆ ಸಮಸ್ಯೆಯಾಗುತ್ತದೆ. ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿ ಎಲ್ಲೇ ಕಲಿತರೂ ಕೂಡ

percentage ಕೋಟಾ ತೆಗೆದುಬಿಡಿ. ಯಾರು, ಯಾವ University ಯಲ್ಲಿ ಬೇಕಾದರೂ ಹೋಗಿ P.G ಮಾಡಬಹುದೆನ್ನುವಂಥ ಅವಕಾಶವನ್ನು ಕಲ್ಪಿಸಿಕೊಡಿ. ಕಲ್ಪಿಸದಿದ್ದರೆ ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಓದಿರುವವನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಬಂದು P.G ಮಾಡುವುದಕ್ಕೆ ಆಗುವುದಿಲ್ಲ. 2%, 3% ಮಾತ್ರ. ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಬಂದು P.G ಮಾಡುವುದಕ್ಕೆ ಆಗುವುದಿಲ್ಲ. ನಾಳೆ ಇದರಿಂದ ಸಮಸ್ಯೆಯಾಗುತ್ತದೆ. ನಾವೇ ಸಮಸ್ಯೆಯನ್ನು ಉಲ್ಬಣ ಮಾಡುವ ರೀತಿ ಆಗಬಾರದು. ಇದು ಭಾವಾತಿರೇಕದಿಂದ ವರ್ತನೆ ಮಾಡಿ ಸಮಸ್ಯೆಯನ್ನು ನಿರ್ಮಾಣ ಮಾಡಿಕೊಳ್ಳುವಂಥ ಕೆಲಸ ಅಲ್ಲ. ನೂರು ಬಾರಿ ಯೋಚನೆ ಮಾಡಿ.

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು):- ಮಾನ್ಯ ಅಧ್ಯಕ್ಷರೆ, ನಾನು ಹೇಳುವಾಗ ನೀವು ಕೇಳಿಲ್ಲ, ಮಾನ್ಯ ಅಶ್ವತ್‌ನಾರಾಯಣ್ ರವರು ಈ ವಿಷಯವನ್ನು ಎತ್ತಿದ್ದರು. 2003 ರಲ್ಲಿ ಯಾವಾಗ ಮಹಿಳಾ ವಿಶ್ವವಿದ್ಯಾನಿಲಯವಾಯಿತು, ಆಗ ಸಹ P.G center ಏನಾಗಬಹುದು ಎಂಬ ಸಮಸ್ಯೆ ಬಂದಾಗ, ಸರ್ಕಾರದಿಂದ issued instructions, ಅದು ಏನೆಂದರೆ, ಕರ್ನಾಟಕ ವಿಶ್ವವಿದ್ಯಾನಿಲಯ ಹಾಗೂ ಗುಲಬರ್ಗಾ ವಿಶ್ವವಿದ್ಯಾನಿಲಯವು ಸಹ ಈ courses equivalent ಎಂದು ತಿಳಿದುಕೊಂಡು ಅವರಿಗೆ P.G ಗೆ ಅವಕಾಶ ಮಾಡಿಕೊಡಬೇಕು. ಒಂದು ಕಡೆ, P.G centers ಅನ್ನು ಯಾವ ಪ್ರಕಾರ ಹೆಚ್ಚು ಮಾಡುವುದಕ್ಕೆ ಸಾಧ್ಯ? ಅದಕ್ಕೆ ಮೂಲಭೂತ ಸೌಕರ್ಯ ಬೇಕು ಮತ್ತು ಮಾನವ ಸಂಪನ್ಮೂಲ ಬೇಕು. ಅದಕ್ಕೆ ಒಂದು ಕಡೆ ಕ್ರಮ ತೆಗೆದುಕೊಳ್ಳುತ್ತೇವೆ. **ಸರ್ಕಾರವು ಸಹ ಎಲ್ಲ ವಿಶ್ವವಿದ್ಯಾನಿಲಯಗಳಿಗೆ ಸಂದೇಶ ಕಳುಹಿಸಿ,** ಅದರ equivalents ಎಲ್ಲ ಪರಿಚಯ ಮಾಡಿಕೊಟ್ಟು ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಮೂಲ ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆಯಲ್ಲಿ ಏನು statement ಕೊಡುತ್ತೀರೆಂದರೆ, ಮಂಡ್ಯವನ್ನು ವಿಸ್ತರಿತ ಕೇಂದ್ರವನ್ನಾಗಿಟ್ಟುಕೊಂಡು, ಬಿಜಾಪುರದ ಮಹಿಳಾ ವಿಶ್ವವಿದ್ಯಾನಿಲಯದ

ಅಧಿಕಾರ ವ್ಯಾಪ್ತಿಯನ್ನು ಸಮಗ್ರ ಕರ್ನಾಟಕ ರಾಜ್ಯಕ್ಕೆ ವಿಸ್ತರಿಸುವುದಕ್ಕೆ. ಈ ರೀತಿ ಏನು ಮೂಲ ಉದ್ದೇಶ ಇಟ್ಟುಕೊಂಡಿದ್ದೀರಿ ಅದು ಸಾರ್ಥಕವಾಗುವುದಿಲ್ಲ. ಇದನ್ನು ತಿದ್ದುಪಡಿ ಮಾಡಿದರೂ ಆಗುವುದಿಲ್ಲವೆನ್ನುವುದು ನನ್ನ ಅಭಿಪ್ರಾಯ. ಬೇಕಾದರೆ ತಾವು ನೋಡಿ. ಇನ್ನು ಆರು ತಿಂಗಳು ಅದಮೇಲೆ ಬೇಕಾದರೆ ನೀವು ನೋಡಿ.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಜಗದೀಶ್ ಶೆಟ್ಟರ್‌ರವೆ, ನಿಮ್ಮ argument ನಲ್ಲಿ Force ಇಲ್ಲವೆಂದು ಹೇಳಿಲ್ಲ. ಆದರೆ, ಪ್ರಜಾಪ್ರಭುತ್ವದಲ್ಲಿ ಒಂದು ಅವಕಾಶವನ್ನು ಕೊಡಬೇಕು, ಕೊಡುತ್ತಿದ್ದೇವೆ. Let us see afterwards.

ಶ್ರೀ ಜಗದೀಶ ಶೆಟ್ಟರ್:– ಮಾನ್ಯ ಸಚಿವರೆ, ಬೇರೆ ವಿಶ್ವವಿದ್ಯಾನಿಲಯವನ್ನು ಮಾಡುವಾಗ ಅದನ್ನು ಏಕೆ ಮಾಡಲಿಲ್ಲ? ಇದನ್ನೇ ಅವತ್ತಿನ ದಿವಸ ಮಾಡಬೇಕಾಗಿತ್ತು. ಅದಕ್ಕೆ ನಾನು ಹೇಳುವುದೇನೆಂದೆ, ಈಗ 6 ತಿಂಗಳು ಆದಮೇಲೆ ನೋಡಿ. ಎಷ್ಟು ಜನ ಬರುತ್ತಾರೆ ಏನೇನಾಗುತ್ತದೆ ಎಂದು ನಿಮಗೇ ಫಲಿತಾಂಶ ಗೊತ್ತಾಗುತ್ತದೆ. ಆಮೇಲೆ ಆದರೂ ತಾವು compulsory ತೆಗೆದುಕೊಂಡು ಬರುತ್ತೀರಾ? ಎನ್ನುವುದನ್ನು ವಿಚಾರ ಮಾಡಿ.

ಅಧ್ಯಕ್ಷರು:– ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.